Land Tribunals and recruitment committees, so that there will be harmonious atmosphere. Let the matter be fixed for Monday. I would like to discuss with the Revenue Minister.

SRI B. BASAVALINGAPPA.—My instructions to my P. A. were that it should be served only on the members of the party. He has taken a list of members. It is a *bonafide* mistake. My intention was also made clear yesterday, while talking to Mr. Deve Gowda and Sri S. R. Bommai that we are also thinking of the participation of opposition members in the Tribunals. Why should the members make much of it ? It is a *bonafide* mistake. Why should they create a hue and cry out of nothing ?

SRI S. R. BOMMAI.—I would like the matter to be thoroughly discussed on Monday. We have to see whether there is breach of privilege. Let us not go into it to-day. Let it be taken up on Monday.

Spread of a new disease in Hosanagar

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಅರಿಕೆ ಇದೆ. ಹೊಸನಗರ, ಸಾಗರ ತಾಲ್ಲೂಕಿನ ಬಹು ಭಾಗಗಳಲ್ಲಿ ಒಂದು ರೀತಿಯ ರೋಗ ಬಂದಿದೆ. ಅದಕ್ಕೆ ತುತ್ತಾದಂತಹ ೨೫೦-೩೦೦ ಜನರು ಆಸ್ಪತ್ರೆಯಲ್ಲಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಮೊದಲು ನೋಟೀಸ್ ಕೊಡಬೇಕು ಈ ರೀತಿ ಮಾತನಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಪಿ. ರಾಮದೇವ್.—ಬಹಳ ಜರೂರು ಪರಿಸ್ಥಿತಿಯಿರುವುದರಿಂದ ಒಂದು ನಿಲುವಳಿ ಸೂಚನೆಯನ್ನು ನಿನ್ನೆಯೇ ಕಳುಹಿಸಿಕೊಟ್ಟಿದ್ದೆನು. ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ. ನಿನ್ನೆಯೇ ನೋಟೀಸ್ ಕೊಟ್ಟಿದ್ದೇನೆ. ಇದು ಬಹಳ ಭೀಕರವಾದ ವಿಚಾರ. ಯಾವಾಗ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಅಧ್ಯಕ್ಷರು ಅನುಮತಿ ಕೊಡದೆ ಎದ್ದು ನಿಂತು ಮಾತನಾಡುವುದು ಬೇಡ. ನೀವು ಹಾಗೆ ಮಾತನಾಡುತ್ತಿದ್ದರೆ ಸಭೆಯ ಕಾರ್ಯಕಲಾಪಗಳು ಹೇಗೆ ನಡೆಯಬೇಕು? ಮುಂದಿನ ಕಾರ್ಯಕ್ರಮದ ಬಗ್ಗೆ ನಾನು ಈಗಾಗಲೇ ಒಬ್ಬ ಮಾನ್ಯ ಸದಸ್ಯರನ್ನು ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಅವರು ಎದ್ದುನಿಂತಿದ್ದಾರೆ,.....

ಶ್ರೀ ಪಿ. ರಾಮದೇವ್.—ತಮಗೆ ನಿನ್ನೆಯೇ ನಿಲುವಳಿ ಸೂಚನೆಗೆ ನೋಟೀಸನ್ನು ಕಳುಹಿಸಿಕೊಟ್ಟಿದ್ದೇನೆ. ಅದು ಯಾವಾಗ ಬರುತ್ತದೆ ?

KARNATAKA SOCIETIES REGISTRATION (AMENDMENT) BILL 1978, AS PASSED BY L. C.

[MOTION TO CONSIDER-DEBBTE CONTIUNED]

† ಶ್ರೀಮತಿ ಎಸ್. ಪ್ರಮೀಳ (ಚಾಮರಾಜಪೇಟೆ)–ಇವತ್ತಿನ ದಿವಸ ಸರ್ಕಾರದವರು ಸೊಸೈಟೀಸ್ ರಿಜಿಸ್ಟ್ರೇಷನ್ ಅಮೆಂಡ್‌ಮೆಂಟ್ ಬಿಲ್ಲನ್ನು ತಂದಿದ್ದಾರೆ. ಅದರ ಉದ್ದೇಶ ಏನಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಆದರೆ ಈ ಬಿಲ್ಲನ್ನು ತರುವ ತುರ್ತು ಪರಿಸ್ಥಿತಿ ಏನಿತ್ತು ಎಂಬುದನ್ನು ಬಿಲ್ಲಿನಲ್ಲಿ

ಎಲ್ಲೂ ನಮೂದಿಸಿಲ್ಲ. ನನಗೆ ತಿಳಿದಹಾಗೆ ಇವತ್ತು ಎಲ್ಲಿ ನಮಗೆ ಗೌರವ ಇದೆಯೋ, ಅಂತಹ ನಮ್ಮ ಈ ವಿಧಾನ ಸೌಧದಲ್ಲಿ ರೇಸ್ ಕ್ಲಬ್ಬಿನ ಆಫೀಸ್ ಮಾಡುವ ಸಲುವಾಗಿ ಈ ತಿದ್ದುಪಡಿಯನ್ನು ತಂದಿದ್ದಾರೆಂದು ಈ ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರಲ್ಲಿ ಒಂದು ವಿಷಯವನ್ನು ತಿಳಿಸಿದ್ದಾರೆ. ಸೆಕ್ಷನ್ 3ರಲ್ಲಿ "other than horse racing" ಅನ್ನುವ ಪದಗಳನ್ನು omit ಮಾಡಿದ್ದಾರೆ. "other than horse racing" ಎನ್ನುವ ಪದಗಳನ್ನು ತೆಗೆದು ಹಾಕಬೇಕೆನ್ನುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ. ಈಗ ಅದನ್ನು ತೆಗೆದು ಬಿಟ್ಟುಟರ್ಫ್ ಕ್ಲಬ್ಬನ್ನು ರಿಜಿಸ್ಟರ್ ಮಾಡಬೇಕೆನ್ನುವ ಉದ್ದೇಶದಿಂದ ಡಿಸೆಂಬರ್ ತಿಂಗಳ 30 ತಾರೀಖು ಅಂದರೆ ಇವರ ಸರ್ಕಾರ ಪಜಾ ಆಗುವುದಕ್ಕೆ ಒಂದು ದಿವಸ ಹಿಂದೆ ಆರ್ಡಿನೆನ್ಸ್ ರೂಪದಲ್ಲಿ ಇದನ್ನು ತಂದಿದ್ದಾರೆ. ರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗಳು ಈ ಟರ್ಫ್ ಕ್ಲಬ್ಬಿನ ಆಡ್‌ವೈಸರಿ ಕೌನ್ಸಿಲ್ಲಿರುತ್ತಾರೆ ಎನ್ನುವ ಪದವನ್ನು ಉಪಯೋಗಿಸಿದ್ದಾರೆ. ಇದನ್ನೆಲ್ಲಾ ನೋಡಿದರೆ ಇವರು ಕೇವಲ ಜೂಜಾಡುವುದಕ್ಕೋಸ್ಕರ, ವಿಧಾನ ಸೌಧದಲ್ಲಿ ಇದರ ಒಂದು ಆಫೀಸನ್ನು ತೆರೆಯುವುದಕ್ಕೋಸ್ಕರ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ ಎಂದು ಅನಿಸುತ್ತದೆ. ಇದು ದುರುದ್ದೇಶದಿಂದ ಕೂಡಿರತಕ್ಕಂಥದ್ದು. ಇದರ ಉದ್ದೇಶ ಒಳ್ಳೆಯದಲ್ಲ. ಇದು ಸಫಲವಾದುದಲ್ಲವೆಂಬುದಾಗಿ ಹೇಳುತ್ತೇನೆ. ೧೯೬೦ರಲ್ಲಿ ಇದರ ಬಗ್ಗೆ ಅಮೆಂಡ್‌ಮೆಂಟ್ ತಂದಿದ್ದರು. ಅದರಲ್ಲಿ "other than horse racing" ಎಂದು ಇತ್ತು. ಈಗ ಇವರು ಅದನ್ನು ಬಿಟ್ಟು ಬಿಟ್ಟಿದ್ದಾರೆ. ಸೊಸೈಟೀಸನ್ನು ರಿಜಿಸ್ಟರ್ ಮಾಡಬಾರದು ಎಂಬುದು ನಮ್ಮ ಉದ್ದೇಶವಲ್ಲ. ಆದರೆ "Other than horse racing shall be omited" ಎನ್ನುವ ಪದವನ್ನು ತೆಗೆದು ಹಾಕಬೇಕು. ಈಗ ಕೆಲಸ ಸುಗಮವಾಗಿ ನಡೆದುಕೊಂಡು ಹೋಗುತ್ತದೆ. ಟರ್ಫ್ ಕ್ಲಬ್ಬನ್ನು ರಿಜಿಸ್ಟರ್ ಮಾಡಿ ವಿಧಾನ ಸೌಧದಲ್ಲಿ ಅದರ ಆಫೀಸ್ ಮಾಡಿದರೆ ವಿಧಾನ ಸೌಧದಲ್ಲಿ ಕೆಲಸ ಮಾಡುತ್ತಿರತಕ್ಕಂಥ ನೌಕರರು ರೇಸ್ ಕ್ಲಬ್ಬಿನಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ದಯಮಾಡಿ ಈ ತಿದ್ದುಪಡಿಯನ್ನು ತರುವುದಕ್ಕೆ ಅವಕಾಶ ಕೊಡಬೇಡಿ ಎಂಬುದಾಗಿ ತಮ್ಮನ್ನು ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇನೆ. ಈಗ ಇರತಕ್ಕಂಥ ಸರ್ಕಾರದ ವಿಶೇಷ ಕಾರ್ಯದರ್ಶಿ, ಹಣಕಾಸು ಇಲಾಖೆ, ಎಕ್ಸ್‌ಸೈಜ್ ಕಮೀಷನರ್, ಜಾಯಿಂಟ್ ಸೆಕ್ರೆಟರಿ ಕಂದಾಯ ಇಲಾಖೆ, ಮತ್ತು ಉಪ ಕಾರ್ಯದರ್ಶಿಗಳು ಗೃಹ ಇಲಾಖೆ, ಹಾಗೂ ಹಣಕಾಸು ಇಲಾಖೆ. ಇಂತಹ ಕಾರ್ಯದರ್ಶಿಗಳು ಇದರ ಫೌಂಡರ್ ಸದಸ್ಯರಾಗಿರುತ್ತಾರೆ. ಇದರಿಂದ ನಾವು ಸರ್ಕಾರಿ ನೌಕರರಿಗೆ ರೇಸಿಂಗ್‌ಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಈ ಉದ್ದೇಶದಿಂದ ಸೊಸೈಟೀಸ್ ಆಕ್ಟ್ ಕೆಳಗಡೆ ರೇಸ್ ಕ್ಲಬ್‌ಗಳನ್ನು ರಿಜಿಸ್ಟ್ರರ್ ಮಾಡಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಈ ಒಂದು ತಿದ್ದುಪಡಿ ಮಸೂದೆಯನ್ನು ಏನು ತಂದಿದ್ದಾರೆ ಇದರ ಉದ್ದೇಶ ಒಳ್ಳೆಯದಲ್ಲ. ಇದಕ್ಕೇನಾದರೂ ನಾವು ಒಪ್ಪಿಗೆ ಕೊಟ್ಟರೆ ಇಲ್ಲಿರತಕ್ಕಂಥ ಸದಸ್ಯರೆಲ್ಲರೂ ರೇಸಿಂಗ್‌ಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಹಾಗೂ ಇದರಿಂದ ಸರ್ಕಾರಿ ನೌಕರರು ರೇಸ್ ಆಡುವುದಕ್ಕೆ, ಸಟ್ಟಾ ಆಡುವುದಕ್ಕೆ, ಹಾಗೂ ಇಸ್ಪಿಟ್ ಆಡುವುದಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಇಂತಹ ಒಂದು ತಿದ್ದುಪಡಿಯನ್ನು ದುರಾದೃಷ್ಟವಶಾತ್ ತಂದಿದ್ದಾರೆ. ಇದರ ಉದ್ದೇಶ ಒಳ್ಳೆಯದಲ್ಲ. It will come into force on the 29th day of September 1977 ಎಂದು ಹೇಳಿದ್ದಾರೆ. ಬೆಂಗಳೂರು ಹಾಗೂ ಮೈಸೂರು ರೇಸ್ ಕ್ಲಬ್‌ಗಳನ್ನು ತಮ್ಮ ಕೈಯ್ಯಲ್ಲೇ ಇಟ್ಟುಕೊಳ್ಳಬೇಕೆಂಬ ದುರುದ್ದೇಶದಿಂದಲೇ ಈ ತಿದ್ದುಪಡಿಯನ್ನು ತಂದಿದ್ದಾರೆ.

ಕ್ಲಬ್ಬನ್ನು ರಿಜಿಸ್ಟರ್ ಮಾಡುವಾಗ "To take over the assets and liabilities of the present Bangalore Turf Club and Mysore Race Club" ಎಂದು ಹೇಳಿದ್ದಾರೆ ಮೈಸೂರು ಕ್ಲಬ್ಬಾಗಲೀ, ಬೆಂಗಳೂರು ಕ್ಲಬ್ಬಾಗಲೀ ಅದು ಕಂಪನೀಸ್ ಆಕ್ಟ್ ಕೆಳಗೆ ರಿಜಿಸ್ಟರ್ ಆಗತಕ್ಕದ್ದು. ಅದು ಕೇಂದ್ರಕ್ಕೆ ಸಂಬಂಧಪಟ್ಟದ್ದು. ಇಂಥ ಕ್ಲಬ್ಬನ್ನು ಈ ಸರ್ಕಾರದವರು ತಮ್ಮದೇ ಆದ ಕ್ಲಬ್ ಎಂದು ಹೇಗೆ ತೆಗೆದುಕೊಳ್ಳುತ್ತಾರೆ? ಇಂಥ ಕ್ಲಬ್ಬುಗಳನ್ನು ಕಾನೂನು ಪ್ರಕಾರ ತೆಗೆದುಕೊಳ್ಳುವುದಕ್ಕೆ ಆಗದೇ ಇರುವ ಸಂದರ್ಭದಲ್ಲಿ ತಿದ್ದುಪಡಿಯನ್ನು ತರುವುದು ಉಚಿತವಲ್ಲ. ಈ ರೀತಿಯಾದರೆ ವಿಧಾನ ಸೌಧ ಜೂಜು ಕಟ್ಟೆಯಾಗುತ್ತದೆ. ಎಲ್ಲ ಸದಸ್ಯರು ಆ ಕ್ಲಬ್ಬಿನಲ್ಲಿ ಕೆಲಸದ ವೇಳೆಯಲ್ಲೂ ಕೂಡ ಆಟವಾಡುವುದಕ್ಕೆ ಅವಕಾಶವಾಗುತ್ತದೆ. ಇದಕ್ಕೆ ಅವಕಾಶ ಮಾಡಿಕೊಡಬಾರದು.

ಇದರಿಂದ ಕರ್ನಾಟಕದ ಜನತೆಗೆ ಒಳ್ಳೆಯದಾಗುವುದಿಲ್ಲ. 'ಬೇಲಿಯೇ ಎದ್ದು ಹೊಲ ಮೇಯಿತು' ಎನ್ನುವಂತಾದರೆ ಸಾರ್ವಜನಿಕರ ಗತಿ ಏನಾಗಬೇಕು? ಮಾಂಗಲ್ಯ ಮಾರಿ ಜೂಜಾಡುವುದಕ್ಕೆ ಹೋಗ ತಕ್ಕ ಪರಿಸ್ಥಿತಿ ರೇಸ್ ಕ್ಲಬ್ಬಿನಲ್ಲಿ ನಡೆಯುತ್ತಿದೆ. ಫೈನಾನ್ಸ್ ಸೆಕ್ರಟರಿ, ರೆವಿನ್ಯೂ ಸೆಕ್ರೆಟರಿಯಂಥ ಅಧಿಕಾರದಲ್ಲಿರತಕ್ಕ ಅಧಿಕಾರಿಗಳೆ ಕೈಯಲ್ಲಿ ರೇಸ್ ಕ್ಲಬ್ಬನ್ನು ನಡೆಸುವುದಕ್ಕೆ ಅವಕಾಶ ಕೊಟ್ಟರೆ ಸಾರ್ವ ಜನಿಕರ ಹಣ ಏನಾಗಬೇಕು? ಕುದುರೆ ಬಾಲಕ್ಕೆ ಹಣ ಇಟ್ಟರೆ ಜನರ ಗತಿ ಏನಾಗಬೇಕು? ಆದ್ದರಿಂದ ಇದು ಗಂಭೀರವಾದ ವಿಷಯ ಇದರ ಮೇಲೆ ತಿದ್ದುಪಡಿ ತರುವುದು ಒಳ್ಳೆಯದಲ್ಲ. ಇದರಿಂದ ಜೀಂದ್ಯ ಸರ್ಕಾರದ ಅಧಿಕಾರವನ್ನು ಮತ್ತು ಕಂಪನೀಸ್ ಆಕ್ಟನ್ನು ಎನ್‌ಕ್ರೋಚ್ ಮಾಡಿದಂತಾಗುತ್ತದೆ. ಆದ್ದರಿಂದ ನಾನು ಇದನ್ನು ಪ್ರತಿಭಟಿಸುತ್ತೇನೆ. ಇದು ಮಾನ್ಯ ಸದಸ್ಯರುಗಳಿಲ್ಲರೂ ವಿಚಾರ ಮಾಡ ತಕ್ಕ ವಿಷಯವಾಗಿದೆ. ಈ ತಿದ್ದುಪಡಿಯನ್ನು ಈ ಸಭೆಯಲ್ಲಿ ತರತಕ್ಕದ್ದು ಒಳ್ಳೆಯದಲ್ಲವಾದ್ದರಿಂದ ಈ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ವಿರೋಧ ಮಾಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[ಛೇರ್ಮನ್ ಅವರು (ಶ್ರೀ ಪೆಜ್. ಟಿ. ಕೃಷ್ಣಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು]

† SRI K. BHASKER NAIDU (Bellary).—Sir, I endorse completely the amendment that has been brought by the Hon. Minister for Revenue. In this connection, I wish to say that it is not the intention of the Government to see that this Vidhana Soudha is converted into another race-course There were so many mal-practices going on and to avoid them, this amendment has been brought by the Hon. Minister. If we don't have control over them, then, it is difficult to set-right things. As the hon. Lady Member says, it is the poor man's money. Actually, the Club is making merry with the money. The rich are making merry with the poor man's money. That is why, the Government wanted to get in. Racing is not a thing that should be encouraged but it has come with our traditions, from the time of the Britishers and it is there all over the world. We cannot bring all the good things in one day. We have to go slow. We cannot take away the racing, or introduce prohibition all of a sudden. If we do it, then, how to run the Govern nent? How can the Government get the money?. Without money, Government cannot exist at all. Let us not scrap everything that we don't want on one day. If we do that, then we will become paupers and make ourselves a laughing stock in the eyes of others. Therefore, the race course is really a thing that has to be taken care of by the Government. I for one would feel that it should be taxed heavily, if you want to prevent the poor people going to it. You want to bring some days as holidays for liquor. Therefore, a man who wins should pay taxes to the Government. It is only rich man who invests more usually wins. Therefore, more tax should be paid to the Government. The Government must have a say in these matters. With these words, I endorse completely the amendment that has been brought by the Hon. Minister and conclude my speech.

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಈ ಪದ್ದುಪಡಿಯ ಮೇಲೆ ಒಂದೆರೆಡು ವಿಚಾರಗಳನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಮುಖ್ಯವಾಗಿ ಹಾರ್ಸ್ ರೇಸಿಗೆ ಏನು ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ ಇದು ನಿಜವಾಗಿಯೂ ಜನತೆಯ ಹಿತವನ್ನು ಬಯಸುವುದಿಲ್ಲ. ಕೆಲವೇ ಜನ ಶ್ರೀಮಂತರು ರೇಸ್ ಕ್ಲಬ್ಬನ್ನು ಇಟ್ಟುಕೊಂಡು ಏನು ಕೋಟ್ಯಾಂತರ ರೂಪಾಯಿ ಲಾಭ ಮಾಡಿಕೊಳ್ಳುತ್ತಿದ್ದಾರೆ ಅವರ ಮೇಲೆ ಹೆತೋಟಿ ತರಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಿದ್ದು ಉಚಿತ ಎಂದು ನನಗನ್ನಿಸುತ್ತದೆ. ಆ ಒಂದು ಉದ್ದೇಶವೇನೋ ಒಳ್ಳೆಯದು. ಆದರೆ ಸಂಪೂರ್ಣವಾಗಿ ಈ ಕುದುರೆ ಜೂಜನ್ನು ತೆಗೆಯುವ ಬಗ್ಗೆ ತೀರ್ಮಾನವಾಗ ಬೇಕಾಗಿತ್ತು. ಆ ಕ್ಲಬ್ ನಡೆಸುವವರು ಕೇವಲ ಕೆಲವೇ ಜನ. ಶ್ರೀಮಂತ ಜನರನ್ನು ಕೈಗೊಂಬೆಗಳನ್ನಾಗಿ ಮಾಡಿಕೊಂಡು ಅವರ ಉತ್ಪನ್ನವನ್ನೆಲ್ಲ ಕಸಿದುಕೊಂಡು ಕೋಟ್ಯಾಧೀಶರಾಗಿದ್ದಾರೆ. ಸರ್ಕಾರ ಅವರ ಮೇಲೆ ತನ್ನ ಹತೋಟಿಯನ್ನಿಟ್ಟಿಲ್ಲ, ಅವರು ಸರ್ಕಾರವನ್ನು ವಂಚಿಸಿ ಏನು ಲಾಭ ಮಾಡುತ್ತಿದ್ದಾರೆ ಅದರ ಮೇಲೆ ಸಂಪೂರ್ಣ ಹತೋಟಿಯನ್ನು ತರುವಂತಹ ಉದ್ದೇಶ ಸ್ವಾಗತಾರ್ಹವಾಗಿದೆ. ಆದರೆ ಮುಂದಿನ ದಿನಗಳಲ್ಲಿ ಈ ಕರ್ನಾಟಕದಲ್ಲಿ ರೇಸನ್ನು ಸಂಪೂರ್ಣವಾಗಿ ರದ್ದು ಮಾಡುವುದಾದರೆ ಮಾನ್ಯ ಕಂದಾಯ ಸಚಿವರ ಒಳ್ಳೆಯ ಹೆಸರು ಕರ್ನಾಟಕ ಇತಿಹಾಸದಲ್ಲಿ ಉಳಿಯುತ್ತದೆ. ಅಂಥ ಪ್ರಯತ್ನವನ್ನು ಮುಂದಾದರೂ ಸಮಗ್ರ ಪದ್ದುಪಡಿ ತಡವಾಗಿ ಮಾಡಲಿ ಎಂದು ಸಲಹೆ ಮಾಡುತ್ತೇನೆ ಎರಡನೆಯದಾಗಿ, ಕೆಲವೇ ಮನೆತನದ ಶ್ರೀಮಂತ ವರ್ಗದವರು ಶಿಕ್ಷಣ ಸಂಸ್ಥೆಗಳ ಮುಖಾಂತರ ಶಾಲೆಗಳನ್ನು ರಿಜಿಸ್ಟರ್ ಮಾಡಿಸಿಕೊಂಡು ನಡೆಸತಕ ಸಂಪ್ರದಾಯ ಸುಮಾರು ೧೫–೨೦ ವರ್ಷಗಳಿಂದ ನಡೆಯುತ್ತಿದೆ. ಅವರುಗಳು ಅದನ್ನು ತಮ್ಮ ಮನೆತನದ ವ್ಯಾಪಾರವಾಗಿ ಮಾಡಿಕೊಂಡಿದ್ದಾರೆ. ಆ ಶಾಲೆಗಳಲ್ಲಿ ತಮ್ಮದೇ ಆದ ಜನಾಂಗದ ಮಕ್ಕಳಿಗೆ ಮಾತ್ರ ಪಾಠಪ್ರವಚನ ಕೊಡುತ್ತಾರೆಯೇ ಏನಹ ಬಡವರ ಮತ್ತು ಸಾಮಾನ್ಯ ಜನರ ಮಕ್ಕಳಿಗೆ ಅಲ್ಲಿ ಅವಕಾಶ ಇಲ್ಲ. ಆ ಶಾಲೆಗಳಲ್ಲಿ ಖಾಸಗೀ ಶಾಲೆಗಳೆಂದು ಹೆಚ್ಚಿನ ದರದಲ್ಲಿ ಫೀಜನ್ನು ವಸೂಲ್ಮಾಡುತ್ತಾರೆ. ಮಕ್ಕಳ ತಂದೆ ತಾಯಿಗಳಿಂದ ಹೆಚ್ಚಿನ ರೀತಿಯಲ್ಲಿ ಹಣವನ್ನು ವಸೂಲ್ಮಾಡುವ ಒಂದು ವ್ಯಾಪಾರವೇ ಆಗಿದೆ. ಹೀಗಾಗಿ ಅವರು ಲಕ್ಷಾಂತರ ರೂಪಾಯಿ ಆಸ್ತಿಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಆರ್. ಗುಂಡೂರಾವ್.—ತಮಿಳುನಾಡಿನಲ್ಲಿ, ಅಲ್ಲಿನ ಸರ್ಕಾರದವರು ರೇಸ್ ಕೋರ್ಸನ್ನು ರದ್ದು ಮಾಡಿದ್ದರು, ನಂತರ ಅದಕೆ ಅವಕಾಶ ಕೊಡಬೇಕೆಂದು ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾಗಿದೆ ಎಂಬ ವಿಷಯವನ್ನು ಮಾನ್ಯ ಸದಸ್ಯರ ಗಮನಕೆ ತರಬಯಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ಆ ವಿಚಾರವನ್ನು ಸರ್ಕಾರದ ನಿರ್ಣಯಕ್ಕೆ ಬಿಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮಿಳುನಾಡಿನ ವಿಚಾರಕ್ಕೆ ಬೇರೆ ಕಾರಣಗಳಿವೆ. ಜೂಜು ನಡೆಯಬೇಕೆಂದು ಮಾನ್ಯ ಗುಂಡೂರಾಯರ ಅಭಿಪ್ರಾಯವಿದ್ದರೆ ಮುಂದುವರಿಸಿಕೊಂಡು ಹೋಗಲಿ. ಆದರೆ ಸಾಧ್ಯವಾದಷ್ಟೂ ಜೂಜು ಮತ್ತು ಪ್ರೊಹಿಬಿಷನ್ ಇವೆರಡನ್ನೂ ತರುವುದಕೆ ಪ್ರಯತ್ನ ಮಾಡ ತಕ್ಕದ್ದು ನಮ್ಮೆಲ್ಲರ ಕರ್ತವ್ಯವಾಗಿದೆ,

ಶ್ರೀ ಎಸ್. ಎಸ್. ಅರಕೇರಿ.—ಆ ಶಾಲಾ-ಕಾಲೇಜುಗಳು ಕೆಲವೇ ಮನೆತನದ ಆಸ್ತಿಯಾಗಿ ಉಳಿಯುತ್ತವೆ; ಕೋಟ್ಯಾಂತರ ರೂಪಾಯಿ ಆಸ್ತಿ ಮಾಡಿಕೊಳ್ಳುತ್ತಿದ್ದಾರೆ. ಆ ಅಸೋಸಿಯೇಷನ್‌ಗಳಲ್ಲೂ ಕೂಡ ತಮ್ಮದೇ ಆದ ಮನೆತನದ ಸದಸ್ಯರನ್ನ ಮಾಡಿಕೊಂಡು ಮತ್ತು ಮ್ಯಾನೇಜಿಂಗ್ ಕಮಿಟಿಯಲ್ಲೂ ಕೂಡ ತಮ್ಮ ಕಡೆಯ ಸದಸ್ಯರನು ನೇಮಿಸಿಕೊಂಡು ವಿದ್ಯಾ ಇಲಾಖೆಯಿಂದ ಲಕ್ಷಾಂತರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿ ಮಾಡುವುದರಿಂದ ಇದು ಮುಂದೆ ಸಾರ್ವಜನಿಕ ಸ್ವತ್ತು ಅಥವಾ ಜನತೆಯ ಒಂದು ಆಸ್ತಿಯಾಗುವುದಿಲ್ಲ. ವೈಯಕ್ತಿಕವಾದ ಆಸ್ತಿಯಾಗಿ ನಿರ್ಮಾಣವಾಗುತ್ತದೆ. ಆದ್ದರಿಂದ ಮಾನ್ಯ ಸಚಿವರು ಈ ರೀತಿ ಆಗುವುದಕ್ಕೆ ಅವಕಾಶವಾಗದಂತೆ ನೋಡಿಕೊಳ್ಳಬೇಕು. ಅಲ್ಲಿ ಅಡ್ಮಿನಿಸ್ಟ್ರೇಟರನು ನೇಮಿಸುವ ಅವಕಾಶವನ್ನು ಕಲ್ಪಿಸಿಕೊಂಡಿದ್ದೀರಿ. ಪರಿಣಾಮಕಾರಿಯಾಗಿ ಇದನ್ನು ಜಾರಿಗೆ ತಂದರೆ ನಿಜವಾಗಿ ತಲೆತಲಾಂತರದಿಂದ ಶಾಲಾಕಾಲೇಜುಗಳನ್ನು ನಡೆಸಿಕೊಂಡು ಜನತೆಯ ಹಣವನ್ನು ಏನು ದೋಚುತ್ತಿದ್ದಾರೆ ಸುಲಿಗೆ ಮಾಡುತ್ತಿದ್ದಾರೆ ಅದನ್ನು ತಪ್ಪಿಸುವಹಾಗಾಗುತ್ತದೆ. ಮಾನ್ಯ ಸಚಿವರು ಈ ದಿಸೆಯಲ್ಲಿ ಹೆಚ್ಚು ನಿಗಾವಹಿಸಿ ಅಧಿಕಾರಿಗಳನ್ನು ಸೂಪರ್‌ವೈಸಿಂಗ್ ಮಾಡುವುದಕ್ಕೆ ನೇಮಿಸಿ

ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತಿರುವ ಅನ್ಯಾಯ, ಅತ್ಯಾಚಾರ, ಅನಾಚಾರ, ಪಂಚಣೆ, ಭ್ರಷ್ಟಾಚಾರ, ಆಗದ ಹಾಗೆ ಮಾಡಬೇಕೆಂದು ಹೇಳಿ ಮತ್ತು ಸರಿಯಾಗಿ ನಡೆಯದೆ ಇರತಕ್ಕಂತಹ ಶಿಕ್ಷಣ ಖಾಸಗಿ ಸಂಸ್ಥೆಗಳನ್ನು ಸರಕಾರ ವಹಿಸಿಕೊಳ್ಳಬೇಕು ಅಂತಾ ಸಲಹೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ಎಸ್. ರೆಡ್ಡಿ (ಮಾಲೂರು).—ಮಾನ್ಯ ಸಭಾಧ್ಯಕ್ಷರೆ, ನಮ್ಮ ವಿರೋಧಪಕ್ಷದ ಸದಸ್ಯರು ಈಗತಾನೆ ಹೇಳಿದ ಹಾಗೆ ನಮ್ಮ ಸರ್ಕಾರದವರು ರೇಸ್‌ಕೋರ್ಸನ್ನು ಹೆಚ್ಚಾಗಿ ತಮ್ಮ ಆಳ್ವಿಕೆಗೆ ತೆಗೆದು ಕೊಂಡಿರುವುದು ಬಹಳ ಸೂಕ್ತವಾದ ಕ್ರಮ. ಮಾನ್ಯ ವಿರೋಧಪಕ್ಷದ ಸದಸ್ಯರು ಮಾತನಾಡುತ್ತಾ ಅನೇಕರು ತಮ್ಮ ಮಾಂಗಲ್ಯಗಳನ್ನು ಮಾರಿ ಅದಕೋಸ್ಕರ ಹಣವನ್ನು ದಂಡ ಮಾಡುತ್ತಿದ್ದಾರೆ, ಇದರಿಂದ ಪ್ರಜೆಗಳಿಗೆ ತೊಂದರೆಯಾಗುತ್ತಿವೆ ಎಂದು ಹೇಳಿದರು. ಜನರಿಗೆ ತೊಂದರೆಯಾಗದಿರಲಿ, ಬಂಡವಾಳ ಶಾಹಿಗಳಿಗೆ ದುಡ್ಡು ಹೋಗದೇ ಇರಲಿ ಎಂದು ಮತ್ತು ಶಿಸ್ತು ಕ್ರಮದಿಂದ ರೇಸ್ ಕೋರ್ಸ್, ಟರ್ಫ್ ಕ್ಲಬ್ ನಡೆಸಿಕೊಂಡು ಹೋಗಲಿ ಎಂಬ ಉದ್ದೇಶದಿಂದ ಈ ಸರ್ಕಾರ ತ್ರಮ ತೆಗೆದುಕೂಡಿದೆ. ಏತಕ್ಕೆಂದರೆ ಸರ್ಕಾರ ಘೋಷಿಸಿದಂತೆ ನಮ್ಮಲ್ಲಿ ಸಾಮಾಜಿಕ ಪರಿವರ್ತನೆಯಾಗಬೇಕು, ಸಮಾಜದಮುನ್ನಡೆಯಾಗಬೇಕು ಸಾರ್ವಜನಿಕ ಪರಿವರ್ತನೆಯಾಗಬೇಕಾದರೆ ಎಲ್ಲದರಲ್ಲೂ ಪರಿವರ್ತನೆಯಾಗಬೇಕು ಬಹಳ ಹಿಂದಿನಿಂದಲೂ ರೇಸ್‌ಕೋರ್ಸ್ ಬಂಡವಾಳಶಾಹಿ ಆಳ್ವಿಕೆಯಿಂದ ಬಂದು ಬಡಬಗ್ಗರಿಂದ ಅದಷ್ಟು ದುಡ್ಡುದೋಚಿಕೊಂಡು ಈಗಲೂ ಕೂಡ ಅನೇಕರನ್ನು ಗುಲಾಮಗಿರಿ ಯಾಟ್ಟುಕೊಂಡಿದ್ದಾರೆ. ಇಂಥಾದ್ದನ್ನು ತಪ್ಪಿಸಬೇಕು, ಏತಕ್ಕೆಂದರೆ ಬಂಡವಾಳಶಾಹಿಗಳ ಹತ್ತಿರ ಗುಲಾಮಗಿರಿಯಾಗಿರುವುದು ಎಷ್ಟರವರೆಗೆ ಇರುತ್ತದೋ ಅಷ್ಟರವರೆಗೆ ನಿಜವಾದ ಸ್ವಾತಂತ್ರ್ಯ ವಿರುವುದಿಲ್ಲ. ಇದನ್ನು ಮಾನ್ಯ ಸದಸ್ಯರು ದಯವಿಟ್ಟು ಗಮನದಲ್ಲಿಟ್ಟುಕೊಳ್ಳಬೇಕು. ಈಗ ತಕ್ಷಣದಲ್ಲೇ ಟರ್ಫ್ ಕ್ಲಬ್ಬನ್ನು ತೆಯುವುದಕ್ಕಾಗುವುದಿಲ್ಲ, ಏಕೆಂದರೆ ಅದಕ್ಕೆ ಕಾನೂನಿನ ಅಡಚಣೆ ಬರುತ್ತದೆ. ಮುಂದೆ ಮುಂದೆ ಅದಷ್ಟು ಈ ರೇಸನ್ನು ತಪ್ಪಿಸಬೇಕಾಗುತ್ತದೆ. ಆ ಉದ್ದೇಶವನ್ನಿಟ್ಟುಕೊಂಡೆ ಸರ್ಕಾರದವರು ಇಂಥ ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡಿರುವುದು ಸರ್ವರೂ ಮೆಚ್ಚಬೇಕಾಗಿದೆ. ಆದ್ದರಿಂದ ಈ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಳ್ಳೂರ್ ಆನಂದರಾವ್ (ರಾಜಾಜಿನಗರ).—ಸನ್ಮಾನ್ಯ ಸಭಾಧ್ಯಕ್ಷರೆ, ರೇಸಿನ ಪ್ರಶ್ನೆ ಇಲ್ಲಿ ಬರುತ್ತಿದೆ. ಆದರೆ ಇದು ಇಲ್ಲಿ ಒಂದು ಪ್ರಶ್ನೆ ಮಾತ್ರ. ಮೂಲ ಪ್ರಶ್ನೆಗಳು ಕೆಲವು ಇವೆ. ಅದನ್ನು ನಾನು ಈ ಸಭೆಯ ಗಮನಕ್ಕೆ ತರುವುದಕೆ ಇಷ್ಟಪಡುತ್ತೇನೆ. ಅಮೆಂಡ್‌ಮೆಂಟುಗಳನ್ನು ತಂದಿರುವ ಉದ್ದೇಶ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ ಅಂಡ್ ರೀಸನ್ಸ್‌ನಲ್ಲಿ ಅಮೆಂಡ್‌ಮೆಂಟ್. ಬಗ್ಗೆ ಹೇಳಿದ್ದಾರೆ. ಇನ್ನೂ ಸ್ವಲ್ಪ ವಿವರವಾಗಿ ಹೇಳಿದ್ದರೆ ಚೆನ್ನಾಗಿತ್ತು. ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ ಮತ್ತು ರೀಸನ್ಸ್‌ನಲ್ಲಿ ವಿವರಣೆಯನ್ನು ಇನ್ನೂ ಸ್ವಲ್ಪ ವಿವರವಾಗಿ ವಿವರಿಸಿದ್ದರೆ ಮತ್ತಷ್ಟು ನಮಗೆ ಅನುಕೂಲವಾಗುತ್ತಿತ್ತು. ತಾವು ಅದರಲ್ಲಿ ಹೇಳಿದ್ದೀರಿ ೧೭ ಸಾವಿರ ಸೊಸೈಟಿಗಳು ರಾಜ್ಯದಲ್ಲಿವೆ ಎಂದು. ತಾವು The Registrar of Societies feels it very difficult to have effective control over all those Societies. ಎಂದು ಹೇಳಿದ್ದೀರಿ. ತಾವು ಎಫೆಕ್ಟೀವ್ ಕಂಟ್ರೋಲ್ ತರುವ ದೃಷ್ಟಿಯಿಂದ ತಿದ್ದುಪಡಿಗಳನ್ನು ತಂದಿದ್ದೀರಿ. ಎರಡನೆಯದಾಗಿ ಡೀಸೆಂಟ್ರಲೈಸ್ ಮಾಡುತ್ತೇವೆಂದು ಹೇಳಿದ್ದೀರಿ. ಸೊಸೈಟಿಗಳನ್ನು ರಿಜಿಸ್ಟರ್ ಮಾಡಿಸಬೇಕಾದರೆ ಇಡೀ ಕರ್ನಾಟಕದಲ್ಲಿ ಬೆಂಗಳೂರಿನಲ್ಲಿ ಒಂದೇ ಕಡೆ ಇದೆ, ರಾಜ್ಯದ ಎಲ್ಲ ಕಡೆಯಿಂದ ಇಲ್ಲಿಗೆ ಬಂದು ರಿಜಿಸ್ಟರ್ ಮಾಡಿಸಬೇಕಾದರೆ ಸ್ವಲ್ಪ ಕಷ್ಟವಾಗುತ್ತದೆ. ಅದಕ್ಕೋಸ್ಕರ ಡೀಸೆಂಟ್ರಲೈಸ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಅದರ ಬಗ್ಗೆ ಇನ್ನಷ್ಟು ವಿವರ ಕೊಟ್ಟಿದ್ದರೆ ಚೆನ್ನಾಗಿತ್ತು. ಮೊದಲನೆಯದಾಗಿ ಎಫೆಕ್ಟೀವ್ ಕಂಟ್ರೋಲ್ ಇಟ್ಟುಕೊಳ್ಳಬೇಕಾದರೆ ಡೀಸೆಂಟ್ರಲೈಸ್ ಮಾಡಬೇಕಾದರೆ, ಅಡ್ಮಿನಿಸ್ಟ್ರೇಟೀವ್ ಪ್ಲಾನ್ ಏನು ಮಾಡಿದ್ದೀರಿ ಎಂಬುದನ್ನು ವಿವರಿಸಿದ್ದರೆ ಚೆನ್ನಾಗಿತ್ತು. ಪ್ರತಿಯೊಂದು ಜಿಲ್ಲೆಯಲ್ಲಿ ಅಧಿಕಾರಿಗಳನ್ನು ನೇಮಕ ಮಾಡಿ ಅವರಿಗೆ ಸೊಸೈಟಿಯನ್ನು ರಿಜಿಸ್ಟರ್ ಮಾಡಿಕೊಳ್ಳತಕ್ಕ ಅಧಿಕಾರವನ್ನು ತಾವು ಡೀಸೆಂಟ್ರಲೈಸ್ ಮಾಡುತ್ತೀರಾ ? ಇದು ನನ್ನ ಅತ್ಯಂತ ಪ್ರಮುಖವಾದ ಪ್ರಶ್ನೆ. ಎರಡನೇದು ತಾವು ಎಫೆಕ್ಟೀವ್ ಕಂಟ್ರೋಲ್ ಎಂದು ಹೇಳಿದ್ದೀರಿ. ಈ ವಿಷಯದಲ್ಲಿ.....

ಶ್ರೀ ಆರ್. ಗುಂಡೂರಾವ್.—ತಾವು ರೇಸ್‌ಗೆ ಹೋಗುತ್ತೀರಾ ?

ಶ್ರೀ ಮಳ್ಳೂರು ಆನಂದರಾವ್.—ನಾನು ರೇಸಿಗೆ ಹೋಗಿಲ್ಲ. ನಾನು ರೇಸನ್ನು ನೋಡಿಲ್ಲ. ರೇಸ್‌ಕೋರ್ಸ್ ಗೋಡೆ ಸುತ್ತ ಹೋಗಿದ್ದೇನೆ. ರೇಸಿನ ಬಗ್ಗೆ ಮಾನ್ಯ ಸದಸ್ಯರಾದ ಪ್ರಮೀಳಾ ಅವರು ಏನು ಹೇಳಿದರು ಅದು ಒಂದು ಸಣ್ಣ ಅಂಶ ಅಷ್ಟೆ. ಅತ್ಯಂತ ಪ್ರಮುಖವಾದ ಅಂಶ ಇದರಲ್ಲಿ ಬೇರೆ ಅಡಗಿದೆ ಈ ಅಮೆಂಟ್‌ಮೆಂಟಿನಲ್ಲಿ ರೇಸ್ ವಿಷಯವೇ ಪ್ರಧಾನವಾಗಿದೆ. ೧೭ ಸಾವಿರ ಸೊಸೈಟಿಗಳಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಪಟ್ಟ ಸೊಸೈಟಿಗಳು ಎಷ್ಟು ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಅಂಕಿ ಅಂಶ ಹೇಳಿದರೆ ಒಳ್ಳೆಯದು. ನನ್ನ ಅಂದಾಜಿನಲ್ಲಿ ಶೇಕಡ ೭೦ಕ್ಕೆ ಮೇಲ್ಪಟ್ಟ ೮೦ ಪರ್ಸೆಂಟಾದರೂ ಆಶ್ಚರ್ಯವಿಲ್ಲ, ಅಷ್ಟು ಶಿಕ್ಷಣ ಸಂಸ್ಥೆಗಳಿವೆ. ಇವತ್ತು ಶಿಕ್ಷಣ ಸಂಸ್ಥೆಗಳನ್ನು ನಡೆಸತಕ್ಕ ಜವಾಬ್ದಾರಿ ಯಾವ ಯಾವ ಸೊಸೈಟಿಗಳು ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್‌ನಲ್ಲಿ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ ಅವರಿಗೆ ಸಂಪೂರ್ಣ ಅಧಿಕಾರ ಬರುತ್ತದೆ. ಸ್ವಾಮಿ ೨೦ ವರ್ಷಗಳ ಕಾಲ ಶಿಕ್ಷಣ ಸಂಸ್ಥೆಗಳು ಹೇಗೆ ಕೆಲಸ ಮಾಡುತ್ತವೆ ಎಂಬ ಒಂದು ವಿಚಾರವನ್ನು ಆಳವಾಗಿ ನಾನು ಅಧ್ಯಯನ ಮಾಡಿದ್ದೇನೆ. ಹಿಂದೆ ವಿಧಾನ ಪರಿಷತ್ತಿನಲ್ಲೂ ಬೇಕಾದಷ್ಟು ಸಾರಿ ಈ ಬಗ್ಗೆ ಹೇಳಿದ್ದೇನೆ. ಇವತ್ತು ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್‌ನಲ್ಲಿ ಅನೇಕ ದೋಷಗಳಿವೆ. ಇವತ್ತು ಮಾನ್ಯ ಮಂತ್ರಿಗಳು ಏನು ತಿದ್ದುಪಡಿಗಳನ್ನು ತಂದಿದ್ದೀರಿ ಇದನ್ನು ನಾನು ವೈಯಕ್ತಿಕವಾಗಿ ಸ್ವಾಗತ ಮಾಡುತ್ತೇನೆ. ಒಂದು ಸಣ್ಣ ಹೆಜ್ಜೆಯನ್ನು ತಾವು ಮುಂದಿಟ್ಟಿದ್ದೀರಿ. ಇವತ್ತಿನ ದಿವಸ ರಿಜಿಸ್ಟ್ರೇಷನ್ ಆಕ್ಟ್‌ನಲ್ಲಿ ಬೇಕಾದಷ್ಟು ದೋಷಗಳಿವೆ. ಆ ದೋಷಗಳಿರುವುದರಿಂದ ಇವತ್ತು ಖಾಸಗಿ ವಿದ್ಯಾಸಂಸ್ಥೆಗಳು ಇಚ್ಛೆಬಂದ ಹಾಗೆ ಆಟ ಆಡಬಹುದು, ಇಚ್ಛೆ ಬಂದಂತೆ ಸರ್ಕಾರದ ಹಣವನ್ನು ಲೂಟಿ ಮಾಡಬಹುದು, ಇಚ್ಛೆಬಂದ ಹಾಗೆ ಸಾರ್ವಜನಿಕರ ಹಣವನ್ನು ಲೂಟಿ ಮಾಡಬಹುದು, ಸಾರ್ವಜನಿಕರ ಹೆಸರಿನಲ್ಲಿ ಆಸ್ತಿಗಳನ್ನು ಮಾಡಿಕೊಂಡು ಅದನ್ನು ತಮ್ಮ ಸ್ವಂತ ಆಸ್ತಿಗಳನ್ನಾಗಿ ಅನುಭವಿಸಬಹುದು, ಅದನ್ನು ಸ್ವಂತ ಆಸ್ತಿಗಳನ್ನಾಗಿ ಪರಿವರ್ತನೆ ಕೂಡ ಮಾಡಿಕೊಳ್ಳಬಹುದು.....

(ಮಾನ್ಯ ಮಂತ್ರಿಗಳು ಪಕ್ಕದಲ್ಲಿ ಕುಳಿತಿದ್ದ ಸದಸ್ಯರ ಸಂಗಡ ಮಾತನಾಡುತ್ತಿದ್ದರು)

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಮಂತ್ರಿಗಳು ನನ್ನ ಮಾತನ್ನು ದಯವಿಟ್ಟು ಸ್ವಲ್ಪ ಕೇಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಸಾಮಾನ್ಯವಾಗಿ ಪಕ್ಕದಲ್ಲಿ ಯಾರಹತ್ತಿರವಾದರೂ ಕೆಲವು ಸಂದರ್ಭದಲ್ಲಿ ಮಾತನಾಡುವುದು ಸಾಮಾನ್ಯವಾದ ಅಭ್ಯಾಸ ಆದರೆ ಸಂಬಂಧಪಟ್ಟ ಮಂತ್ರಿಗಳ ಕೊನೇಪಕ್ಷ ಅವರಿಗೆ ಸಂಬಂಧಪಟ್ಟ ವಿಷಯದಲ್ಲಿ ಮಾನ್ಯ ಸದಸ್ಯರು ಮಾತನಾಡುವಾಗಲಾದರೂ ಬೇರೆಯವರ ಹತ್ತಿರ ಮಾತನಾಡುವುದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಕೇಳುತ್ತಾ ಇದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ —ಸಂಬಂಧಪಟ್ಟ ಮಂತ್ರಿಗಳು ಸದಸ್ಯರು ಹೇಳುತ್ತಿರುವ ವಿಷಯದ ಕಡೆ ಗಮನ ಕೊಡಬೇಕು. ಆ ಸಂದರ್ಭದಲ್ಲಿ ಮತ್ತೊಬ್ಬ ಸದಸ್ಯರು ಬಂದು ಕುಳಿತುಕೊಂಡು ಮಾತನಾಡುತ್ತಿದ್ದರೆ ಗಮನ ಅಷ್ಟಾಗಿ ಈ ಕಡೆ ಇರುವುದಿಲ್ಲ.

ಛೇರ್ಮನ್.—ಹೌದು, ಅದು ಸರಿಯಲ್ಲ.

ಅಧ್ಯಕ್ಷರೆ, ಇವೊತ್ತು ಶಿಕ್ಷಣ ಸಂಸ್ಥೆಗಳಲ್ಲಿ ಯಾವರೀತಿ ನಡೆಯುತ್ತಿದೆ ಎಂದರೆ, ಏಳು ಜನ ಸದಸ್ಯರು ಸೇರುವುದು ಅಲ್ಲಿ ಹೋಗಿ ರಿಜಿಸ್ಟರ್ ಮಾಡಿಕೊಂಡು ಬರುವುದು ಈ ರೀತಿ ನಡೆಯುತ್ತಿದೆ, ಇವೊತ್ತು ಸಂಜೆ ವೇಳೆಯಲ್ಲಿ ರಿಜಿಸ್ಟ್ರೇಷನ್ ಮಾಡಲಿಕ್ಕೆ ಕಾಗದ ಪತ್ರಗಳನ್ನು ಕೊಟ್ಟರೆ ಪುರಾನೆಯ ದಿವಸ ಬೆಳಿಗ್ಗೆ ಪೂರ್ತಿಗೆ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಕೊಡುತ್ತಾರೆ. ಈ ರೀತಿ ರಿಜಿಸ್ಟ್ರೇಷನ್ ಮಾಡಿಕೊಡಲಿಕ್ಕೆ ಒಂದು ಫೀಜು ಇರುತ್ತದೆ. ಅದನ್ನು ಕೊಟ್ಟು, ಮತ್ತೊಂದು ಫೀಜು ಅವರು ಏನು ಇಟ್ಟುಕೊಂಡಿರುತ್ತಾರೆ ಅದನ್ನು ಕೊಟ್ಟುಬಿಟ್ಟರೆ ಒಂದೇ ಒಂದು ದಿವಸದಲ್ಲಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಕೊಟ್ಟುಬಿಡುತ್ತಾರೆ. ಒಂದು ಸಾರಿ ಸೊಸೈಟಿಯನ್ನು ರಿಜಿಸ್ಟರ್ ಮಾಡಿದಮೇಲೆ ಅವರಿಗೂ, ಇವರಿಗೂ ಸಂಬಂಧವೇ ಇರುವುದಿಲ್ಲ. ಈ ನಿಮ್ಮ ಸೊಸೈಟೀಸ್ ರಿಜಿಸ್ಟ್ರೇಷನ್ ಆ್ಯಕ್ಟ್‌ನಲ್ಲಿ ಏನೇನು ಕ್ಲಾಸ್ ನಮೂದು ಮಾಡಿದ್ದೀರಿ ಆ ಪ್ರಕಾರ ಆ ಸೊಸೈಟಿಗಳು ಕೆಲಸ ಮಾಡುತ್ತಿವೆಯೇ ಇಲ್ಲವೇ ಅವುಗಳ ಮೇಲೆ ಎಫೆಕ್ಟೀವ್ ಕಂಟ್ರೋಲ್ ಇಟ್ಟುಕೊಳ್ಳಲಿಕ್ಕೆ ಆಗುತ್ತದೆಯೇ ಇಲ್ಲವೇ, ಈ ವಿಚಾರವೇ ಇಲ್ಲ. ಇವೊತ್ತು ರಿಜಿಸ್ಟ್ರೇಷನ್ ಮಾಡಿಕೊಡತಕ್ಕಂತಹ ಆಫೀಸು, ಬರೀ ಠಸ್ಸೆ ಹಾಕಿ ಕೊಡತಕ್ಕ ಆಫೀಸ್

ಆಗಿದೆ. ಇವೊತ್ತು ಒಂದು ಸಾರಿ ಸೊಸೈಟಿ ರಿಜಿಸ್ಟ್ರೇಷನ್ ಆಯಿತು ಎಂದರೆ, ಅವರಿಗೆ ತಕ್ಷಣ ಪೂರ್ತಿ ಲೈಸನ್ಸ್ ಸಿಕ್ಕುತ್ತದೆ, ಆಗ ಅವರು ಏನು ಬೇಕಾದರೂ ಮಾಡಬಹುದು. ಲೂಟಿ ಮಾಡಲಿಕ್ಕೆ ಅವಕಾಶ ಸಿಕ್ಕುತ್ತದೆ. ಇವೊತ್ತು ಶಿಕ್ಷಣ ಇಲಾಖೆ ಕುರಿತು ವಿಚಾರ ಹೇಳುವುದಾದರೆ, ಶೇಕಡ ೮೦ ಪರ್‌ಸೆಂಟ್ ಇನ್‌ಸ್ಪಿಟ್ಯೂಷನ್‌ಗಳು ಇವೆ. ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಈ ಆಕ್ಟ್ ಪ್ರಕಾರ ಇಂಟರ್‌ವಿನ್ ಆಗಲಿಕ್ಕೆ ಅವಕಾಶ ಇಲ್ಲ. ಆದ್ದರಿಂದ ನಮಗೆ ಅಧಿಕಾರ ಇಲ್ಲ ಎಂದು ಎಜುಕೇಷನ್ ಡಿಪಾರ್ಟ್‌ಮೆಂಟ್ ನವರು ಹೇಳುತ್ತಾರೆ. ಇವೊತ್ತು ಅಡ್ಮಿನಿಸ್ಟ್ರೇಟರ್ ಹಾಕುವ ಏನು ಒಂದು ಕ್ಲಾಸ್ ಇಂಟ್ರಡ್ಯೂಸ್ ಮಾಡುತ್ತಿದ್ದೀರಿ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಹಾಗೆ ಆಡ್ವೈಸರಿ ಕೌನ್ಸಿಲ್ ಅವರಿಗೆ ಸಹಾಯ ಮಾಡಲಿಕ್ಕೆ ನೇಮಿಸುತ್ತಿದ್ದೀರಿ ಇದನ್ನು ನಾನು ಸ್ವಾಗತಿಸುತ್ತೇವೆ. ಆದರೆ ೧೭ ಸಾವಿರ ಸೊಸೈಟಿಗಳನ್ನು ಕಂಟ್ರೋಲ್ ಮಾಡತಕ್ಕಂಥಹ ಒಂದು ವ್ಯವಸ್ಥೆ ನಿಮ್ಮ ಈ ಡಿಪಾರ್ಟ್‌ಮೆಂಟ್‌ನಲ್ಲಿ ಇದೆಯೇ ಎಂದು ಕೇಳಬೇಕಾಗಿದೆ. ಇವೊತ್ತು ತಾವು ಯಾವ ಸೊಸೈಟಿಗಳು ನಿಮ್ಮ ಆಕ್ಟ್ ಪ್ರಕಾರ ಸರಿಯಾಗಿ ಕೆಲಸ ಮಾಡಿಲ್ಲ ಎಂದು ತನಿಖೆ ಮಾಡಿದರೆ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ ೮೦ರಷ್ಟು ಸಿಕ್ಕುತ್ತವೆ. ಸುಮಾರು ೮೦ ರಷ್ಟು ಶಿಕ್ಷಣ ಸಂಸ್ಥೆಗಳು ನೀವು ಹಾಕಿರತಕ್ಕ ಆಕ್ಟ್ ಮಾಡಿಲ್ಲ. ಇವೊತ್ತು ಒಂದು ಸಾವಿರ ಇನ್‌ಸ್ಪಿಟ್ಯೂಷನ್‌ಗೆ ಅಡ್ಮಿನಿಸ್ಟ್ರೇಟರ್ ನೇಮಿಸುವ ಪರಿಸ್ಥಿತಿ ಬಂದರೆ ಅಷ್ಟನ್ನು ವ್ಯವಸ್ಥೆ ಮಾಡತಕ್ಕಂತಹ ಒಂದು ಅಡ್ಮಿನಿಸ್ಟ್ರೇಷನ್ ವ್ಯವಸ್ಥೆ ನಿಮ್ಮಲ್ಲಿ ಇದೆಯೇ? ನಿಮ್ಮ ಡಿಪಾರ್ಟ್‌ಮೆಂಟ್‌ನಿಂದ ಆ ಕೆಲಸ ಮಾಡಲಿಕ್ಕೆ ಸಾಧ್ಯವಿದೆಯೇ ಎಂದು ಕೇಳಬೇಕಾಗಿದೆ. ಇವೊತ್ತು ರಿಜಿಸ್ಟ್ರೇಷನ್ ಮಾಡಿಸಬೇಕು ಎಂದು ಹೇಳಿದರೆ, ಅದರ ಆಫೀಸನ್ನು ಸರ್ವೆ ಡಿಪಾರ್ಟ್‌ಮೆಂಟಿನಲ್ಲಿ ಎಲ್ಲಿಯೋ ಮೂರನೇ ಮಹಡಿಯಲ್ಲಿರತಕ್ಕದ್ದನ್ನು ಹುಡುಕಿಕೊಂಡು ಹೋಗಬೇಕಾಗಿದೆ. ಒಟ್ಟು ೭ ಜನ ಸದಸ್ಯರು ಸೇರಿದರೆ, ಅವರು ಒಂದು ಠಸ್ಸೆ ಹಾಕಿ ರಿಜಿಸ್ಟರ್ ಮಾಡಿಕೊಡುತ್ತಾರೆ. ಈ ರೀತಿ ರಿಜಿಸ್ಟರ್ ಮಾಡಿಕೊಟ್ಟಮೇಲೆ ತಾವು ರಿಜಿಸ್ಟರ್ ಮಾಡಿದಂಥ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿವೆಯೇ, ಯಾವ ಸೊಸೈಟಿಗಳು ಡೀಫಂಕ್ಟ್ ಆಗಿವೆ, ಯಾವ ಸೊಸೈಟಿಗಳಲ್ಲಿ ಹಣ ಲೂಟಿ ಮಾಡುತ್ತಿದ್ದಾರೆ, ಇದನ್ನು ಚೆಕ್ ಮಾಡುವ ವ್ಯವಸ್ಥೆ ಇಲ್ಲ. ಈ ಅಡ್ಮಿನಿಸ್ಟ್ರೇಟರ್ ಹಾಕುವುದು, ಮತ್ತೆ ಈ ಒಂದು ಆಡ್ವೈಸರಿ ಕೌನ್ಸಿಲ್ ನೇಮಕ ಮಾಡುವುದು ಇದು ಕೇವಲ ಪೇಪರ್‌ನಲ್ಲಿ ಆಕ್ಟ್‌ನಲ್ಲಿ ಉಳಿಯುತ್ತದೆಯೇ ಹೊರತು ಏಂದಿತ ಎಫೆಕ್ಟ್‌ನಲ್ಲಿ ಆಗುವುದಿಲ್ಲ ಎನ್ನುವ ಶಂಕೆ ನನಗೆ ಇದೆ. ಇವೊತ್ತು ಅಡ್ಮಿನಿಸ್ಟ್ರೇಟರ್ ಹಾಕುವುದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಎಫೆಕ್ಟೀವ್ ಕಂಟ್ರೋಲ್ ತರುವ ದೃಷ್ಟಿಯಿಂದ ಏನೇನು ಸಬ್ಸಿಡ್ಯೆಂಟ್ ತರಬೇಕು ಅದನ್ನು ತರಬೇಕಾಗಿದೆ. ಇವೊತ್ತು ಕೋ-ಆಪರೇಟಿವ್ ಇನ್‌ಸ್ಟಿಟ್ಯೂಷನ್‌ನಲ್ಲಿ ಯಾವರೀತಿ ಮಾಡುತ್ತಿದ್ದಾರೆ, ಆ ಎಫೆಕ್ಟೀವ್ ಕಂಟ್ರೋಲ್ ಮಾಡುವ ಲೆವಲ್‌ನಲ್ಲಿ ಇದನ್ನು ಯೋಚನೆಮಾಡಿ ತರಬೇಕು. ಇಲ್ಲದಿದ್ದರೆ ಸಾರ್ವಜನಿಕರ ಹಣವನ್ನು ಲೂಟಿ ಮಾಡಲಿಕ್ಕೆ ಈ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ ಒಂದು ಲೈಸನ್ಸಿಂಗ್ ಅಥಾರಿಟಿಯಾಗುತ್ತದೆ. ಲೈಸನ್ಸ್ ತೆಗೆದು ಕೊಳ್ಳುವುದು, ಸಾರ್ವಜನಿಕರ ಹಣ ಲೂಟಿ ಮಾಡುವುದು. ರಿಜಿಸ್ಟರ್ ಎಂದು ಹಾಕಿ ಕೊಳ್ಳುವುದಕ್ಕೆ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಇದ್ದರೆ ಸಾಕು. ಹಣ ಲೂಟಿ ಮಾಡಲಿಕ್ಕೆ ಪ್ರಾರಂಭ ಮಾಡುತ್ತಾರೆ. ಪೂರ್ತಿಯಾಗಿ ಕಂಟ್ರೋಲ್ ಮಾಡಲಿಕ್ಕೆ ವ್ಯವಸ್ಥೆ ಮಾಡಿ ಅದಕ್ಕೆ ಪೂರ್ತಿ ಸಹಕಾರ ಕೊಡುತ್ತೇವೆ. ೧೭ ಸಾವಿರ ಸೊಸೈಟಿಗಳನ್ನು ಕಂಟ್ರೋಲ್ ಮಾಡತಕ್ಕ ವ್ಯವಸ್ಥೆ ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಮಾಡಿಲ್ಲ. ಆದ್ದರಿಂದ ಡಿಸ್ಟ್ರಿಕ್ಟ್ ಲೆವೆಲ್‌ವರೆಗೂ ಡೀಸೆಂಟ್ರಲೈಸೇಷನ್ ಮಾಡಬೇಕೆಂದು ಪ್ರಾರ್ಥನೆ ಮಾಡಿ, ಅಧ್ಯಕ್ಷರು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಭೀಮಣ್ಣ ಎಸ್. ಖಂಡ್ರೆ (ಭಾಲ್ಕಿ). — ಮಾನ್ಯ ಅಧ್ಯಕ್ಷರೆ, ಈಗ ಮಾನ್ಯಮಂತ್ರಿಗಳು ಏನು ಈ ತಿದ್ದುಪಡಿಯನ್ನು ತಂದಿದ್ದಾರೆ ಅದಕ್ಕೆ ನಾನು ಬಲವಾಗಿ ವಿರೋಧ ಮಾಡುತ್ತೇನೆ. ಇವೊತ್ತು ಈ ಅಮೆಂಡ್‌ಮೆಂಟ್ ತಂದಿರತಕ್ಕಂತಹ ಶ್ರೀ ಮಾನ್ ಬಸವಲಿಂಗಪ್ಪನವರ ಬಗ್ಗೆ ನನಗೆ ಬಹಳ ಪ್ರೀತಿ ಇದೆ. ಆದರೆ ಇವರು ಈ ಒಂದು ಅಮೆಂಡ್‌ಮೆಂಟ್ ಬಿಲ್ಲನ್ನು ಹೇಗೆ ಒಪ್ಪಿಕೊಂಡು ತಂದರು ಎನ್ನುವುದು ನನಗೆ ಆಶ್ಚರ್ಯವಾಗಿದೆ. ಇದರ ಉದ್ದೇಶ ಏನು ಎನ್ನತಕ್ಕದ್ದನ್ನು ಮೊದಲು ನೋಡಬೇಕಾಗಿದೆ. ಈಗ ಇವರು ಸೆಕ್ಷನ್ ೩ರಲ್ಲಿ ಏನು ತಂದಿದ್ದಾರೆ ಅದನ್ನು ನಾನು ಒಪ್ಪಲಿಕ್ಕೆ ತಯಾರಿಲ್ಲ. ಈಗ ಈ ಗ್ಯಾಂಬ್ಲಿಂಗ್, ಲಾಟರಿ, ಮಟ್ಕ, ಈ ಪ್ರಕಾರ ಸೇರಿಸಿದರೆ ಸರಿ ಇಲ್ಲ ಎಂದು ಹೇಳುತ್ತೇನೆ. ಇಲ್ಲಿ ಈಗ ಏನು ತಂದಿದ್ದಾರೆ ಅದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈ ರೀತಿ ಮಾಡುತ್ತಾ ಹೋದಲೆ ಮುಂದೆ ಹೇಗೆ ಆಗುತ್ತದೆ ಎಂದರೆ, ಕುದುರೆ ಸಂಖ್ಯೆ, ಜೂಜಾಡತಕ್ಕವರ

ಸಂಖ್ಯೆ. ಲಾಟರಿ ಸಂಖ್ಯೆ ಹೆಚ್ಚಾಗಿ ಮುಂದೆ ಚುನಾವಣೆಯಲ್ಲಿ ಕುಡುಕರ ಸರ್ಕಾರ ಬರುತ್ತದೆ ಎನ್ನುವ ಹಾಗೆ ಆಗಿದೆ. ಆ ಒಂದು ದಾರಿಯಲ್ಲಿ ಈ ಅಮೆಂಡ್‌ಮೆಂಟ್ ತಂದು ಕೊಸ್ಟ್ಲಂತಾಗುತ್ತದೆ. ಆದ್ದರಿಂದ ಇದನ್ನು ತಪ್ಪಿಸುವುದು ಬಹಳ ಆವಶ್ಯಕ ಇದೆ. ಎಲ್ಲ ಸದಸ್ಯರು ವಿಶೇಷವಾಗಿ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ದಯವಿಟ್ಟು ಆ ದಾರಿಯಲ್ಲಿ ತೆಗೆದುಕೊಂಡು ಹೋಗಬೇಡಿ ಎಂದು ಹೇಳುತ್ತೇನೆ. ಮತ್ತೆ ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಏನೇನು ನಡೆದಿದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮಲ್ಲಿ ಒಂದು ಗಾದೆ ಇದೆ: ''ಅಂಧೇರಿ ನಗರಿ ಚೌಪಟಿರಾಜ್'' ಎಂದು ಹೇಳುವಂತೆ. ನಮ್ಮ ಈ ರೇಸಿನ ಹೆಸರಿನಲ್ಲಿ ಜನರನ್ನು ಕತ್ತಲ ದೇಶದಲ್ಲಿ ವಯ್ಯುತ್ತಿದ್ದೀರಿ.

11-30 A.M.

Sri S.M. Yahya:—Racing has been there for quite some time and there is nothing new. Even according to the law, if you read the Indian Contract Act, exception is given to racing. So you cannot go on charging that this Government is introducing all this.

ಶ್ರೀ ಭೀಮಣ್ಣ ಖಂಡ್ರೆ.—ಹಿಂದಿನ ಕಾಲದಲ್ಲಿ ನಮ್ಮಲ್ಲಿ ವೇಶ್ಯಾವೃತ್ತಿ ಇತ್ತು. ಇವತ್ತು ಅದನ್ನು ಮುಂದುವರಿಸಿಕೊಂಡು ಬರುವುದಕ್ಕೆ ಆಗುತ್ತದೆಯೇ ? ರೇಸ್‌ಕೊರ್ಸಿಗೆ ಮುಂದೆ ಅಮೆಂಡ್‌ಮೆಂಟ್ ತಂದು ಸರ್ಕಾರದವರು ವೇಶ್ಯಾಶಾಲೆಗಳನ್ನು ಕಟ್ಟಿಸಿ ಅದರಿಂದ ಹಣ ಸಂಪಾದನೆ ಮಾಡಬಹುದು. ಸರ್ಕಾರಕ್ಕೆ ಟ್ಯಾಕ್ಸ್ ಹೆಚ್ಚಿಗೆ ಬರುತ್ತದೆ. ಅದೇ ರೀತಿ ಬ್ರಷ್ಟರ ಕ್ಲಬ್ ಎಂದು ಮಾಡಿ. ಯಾರು ಬ್ರಷ್ಟರು ಇದ್ದಾರೆ, ಸಾವಿರಾರು ರೂಪಾಯಿ ಗಳಿಸಬೇಕು ಎಂದು ಇರುತ್ತಾರೆ, ಅವರಿಂದಲೂ ಕೂಡ ಹೆಚ್ಚಿಗೆ ಹಣ ಸಂಪಾದನೆ ಮಾಡಬಹುದು. ಸರ್ಕಾರಕ್ಕೆ ಬರೀ ರೊಕ್ಕ ಸೇರಿಸುವ ಕೆಲಸವೇ ಆಗಿದೆ.

ಇನ್ನು ಮಾನ್ಯ ಮಂತ್ರಿಗಳು ವಿಕೇಂದ್ರೀಕರಣ ಮಾಡುವ ಬಗ್ಗೆ ಸಹಾ ಹೇಳಿದ್ದಾರೆ. ವಿಕೇಂದ್ರೀಕರಣ ಡೆಲ್ಲಿಯಿಂದ ಸಂಸ್ಥಾನದವರೆಗೆ, ಸಂಸ್ಥಾನದಿಂದ ಡಿಸ್ಟ್ರಿಕ್ಟ್ ವರೆಗೆ, ಡಿಸ್ಟ್ರಿಕ್ಟ್‌ನಿಂದ ತಾಲ್ಲೂಕ್‌ವರೆಗೆ ತಾಲ್ಲೂಕ್‌ನಿಂದ ಪಂಚಾಯ್ತಿವರೆಗೆ ವಿಕೇಂದ್ರೀಕರಣವಾಗಬೇಕು. ಆದರೆ ಸರ್ಕಾರದವರು ಪವರ್ ಮಾತ್ರ ವಿಕೇಂದ್ರೀಕರಣ ಮಾಡುತ್ತಿಲ್ಲ, ಉದ್ದೇಶ ಏನು ಸೊಸೈಟಿಯಲ್ಲಿ ಸ್ಪೆಸಿಫಿಕ್ ಜನ ಏನು ಇದ್ದಾರೆ ಅವರನ್ನು ತಪ್ಪಿಸಿ ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಕ ಮಾಡುವುದಕ್ಕಾಗಿ ತಂದಿದ್ದಾರೆ. ೧೫ ವರ್ಷಗಳಿಗೆ ಮೊದಲು ಎಸ್.ಕೆ. ಡೇ ಎನ್ನುವವರು ಸೆಂಟ್ರಲ್‌ನಲ್ಲಿ ಪಂಚಾಯತ್ ರಾಜ್ಯ ಮಂತ್ರಿಗಳಾಗಿದ್ದಾಗ ಕರ್ನಾಟಕದ ಬಗ್ಗೆ ಒಂದು ಮಾತು ಹೇಳಿದ್ದಾರೆ. ಕರ್ನಾಟಕದಲ್ಲಿ ತಾಲ್ಲೂಕು ಬೋರ್ಡುಗಳು ಇಲ್ಲ ಪಂಚಾಯಿತಿಗಳು ಇಲ್ಲ ಎಂದು. ಇವತ್ತು ಸರ್ಕಾರದವರು ಡೆಮಾಕ್ರಸಿಯನ್ನು ಮಾಕರಿ ಮಾಡಿದ್ದಾರೆ. ಕರ್ನಾಟಕದಲ್ಲಿ ಪಂಚಾಯಿತಿ ರಾಜ್ಯ ಇಲ್ಲವೇ ಇಲ್ಲ. ಮಹಾರಾಷ್ಟ್ರದಲ್ಲಿ ಇದೆ, ಆಂಧ್ರದಲ್ಲಿ ಇದೆ. ಕಳೆದ ೧೦ ವರ್ಷಗಳಿಂದ ಲೋಕಲ್‌ಬಾಡೀಸ್ ಚುನಾವಣೆಗಳನ್ನು ವಿನಾಕಾರಣ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಕೋ-ಆಪರೇಟೀವ್ ಇನ್‌ಸ್ಟಿಟ್ಯೂಷನ್‌ಗಳು ಇವತ್ತು ಯಾವರೀತಿಯಲ್ಲಿ ನಡೆಯುತ್ತಿವೆ ಎಂಬುದನ್ನು ನಾವು ನೋಡಿದ್ದೇವೆ. ಸರ್ಕಾರದವರು ಕೇಂದ್ರೀಕರಣ ಮಾಡಿಕೊಂಡು ಸೊಸೈಟಿಗಳನ್ನು ನಡೆಸುವುದಕ್ಕೆ ಹೊರಟಿದ್ದಾರೆ ಅದು ಸಾಧ್ಯವಾಗುವುದಿಲ್ಲ. ಇಲ್ಲಿ ಸರ್ಕಾರದ ಉದ್ದೇಶವಾದರೂ ಏನು ಸರ್ವ ಅಧಿಕಾರವನ್ನು ತಮ್ಮ ಕೈಯಲ್ಲಿಟ್ಟುಕೊಂಡು ನಮಗೆ ಬೇಕಾದಂತವರಿಗೆ ನಾಮಿನೇಟ್ ಮಾಡಬೇಕು. ಈಗ ಎರಡು ವರ್ಷ ಆಗಲಿಲ್ಲ ಎಂದು ಮತ್ತೆ ನಾಲ್ಕು ವರ್ಷ ಮಾಡಿದ್ದಾರೆ. ಹೀಗೆ ಟರ್ಮ್ ಮುಂದುವರಿಸುವ ನಿಮ್ಮ ಉದ್ದೇಶವಾದರೂ ಕೂಡ ಅಲ್ಲಿ ನಮ್ಮವರು ಯಾರು ಇಲ್ಲ, ಹೇಳುವವರು ಇಲ್ಲ, ಕೇಳುವವರು ಇಲ್ಲ, ನಮ್ಮ ಪಾರ್ಟಿಯ ಜನರನ್ನು ಹಾಕಬೇಕೆಂಬ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದಾರೆಂದು ಹೇಳುತ್ತೇನೆ. ಸರ್ಕಾರದವರು ಈ ರೀತಿ ಮಾಡುವುದು ಸರಿಯಲ್ಲ, ಡೆಮಾಕ್ರಸಿ ತತ್ವಕ್ಕೆ ವಿರೋಧವಾಗಿ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರದವರು ಈ ಪ್ರಕಾರ ಮಾಡುವುದಕ್ಕೆ ಹೋದರೆ ರಾಜ್ಯದಲ್ಲಿ ಕ್ರಾಂತಿ ಯಾಗುತ್ತದೆ. ಪ್ರತಿಯೊಂದು ತಾಲ್ಲೂಕು ಬೋರ್ಡುಗಳಿಗೂ ಚುನಾವಣೆಗಳು ನಡೆಯಲೇಬೇಕು. ಮೊನ್ನೆ ಮೊರಾರ್ಜಿ ದೇಸಾಯಿಯವರು ಮಾರಲ್ ರೇರ್‌ರಿಮುವ್‌ಮೆಂಟ್ ಕಾನ್‌ಫೆರೆನ್ಸ್‌ನಲ್ಲಿ ಮಾತನಾಡುತ್ತಾ, ಈ ದೇಶಕ್ಕೆ ಕಾನೂನಿನ ಜೊತೆಗೆ ನೈತಿಕ ಮತ್ತು ಆದರ್ಶ ಬೇಕು, ಬರೀ ರಾಜಕಾರಣದಿಂದಲೇ ದೇಶವನ್ನು ಉಳಿಸುವುದಕ್ಕೆ ಆಗುವುದಿಲ್ಲ, ಈ ದೇಶಕ್ಕೆ ಕಾನೂನಿನ ಜೊತೆಗೆ ನೈತಿಕ ಪಾಯ ಮತ್ತು ಧಾರ್ಮಿಕಪಾಯ

ಬೇಕು ಎಂದು ಹೇಳಿದ್ದಾರೆ. ಇವತ್ತು ಸರ್ಕಾರದವರು ಅನೀತಿಯುತವಾದ ಕಾನೂನು ತಂದು ಜೆಮಾಕ್ಸಿ ಹೆಸರನ್ನೇ ಇಲ್ಲದಂತೆ ಮಾಡುತ್ತಿದ್ದಾರೆ. ಈ ದೇಶದಲ್ಲಿ ಶಾಂತಿ ಹೆಸರಿನಲ್ಲಿ ದೊಡ್ಡ ದೊಡ್ಡ ಶಾಂತಿ ಪಾಲನೆ ಭಂಗಗಳು ನಡೆದಿವೆ. ಇವತ್ತು ಈ ದೇಶದಲ್ಲಿ ಬ್ಯೂರೊಕ್ರಸಿ ಬರುತ್ತಿದೆ. ಸರ್ಕಾರ ಇವತ್ತು ಕೂಡಲೇ ಎಲೆಕ್ಷನ್ ಮಾಡುವುದಕ್ಕೆ ವ್ಯವಸ್ಥೆ ಮಾಡುವುದು ಸರಿ. ಎಲ್ಲಿ ಬ್ರುಷ್ಟರು ಇದ್ದಾರೆ ಅಲ್ಲಿ ಕಂಟ್ರೋಲ್ ಮಾಡಿ. ಇವತ್ತು ಲ್ಯಾಂಡ್ ಟ್ರಿಬ್ಯೂನಲ್‌ಗಳಲ್ಲಿ ಏನು ನಡೆದಿದೆ ಎಂಬುದು ಗೊತ್ತಿದೆ, ನಾನು ಈ ಅಮೆಂಡ್‌ಮೆಂಟನ್ನು ಬಲವಾಗಿ ವಿರೋಧಿಸುತ್ತೇನೆ. ಮತ್ತೆ ಮಂತ್ರಿಗಳಲ್ಲಿ ನನ್ನ ಒಂದು ಅರಿಕೆ ಏನೆಂದರೆ ತಾವು ಈ ದಾರಿಯಲ್ಲಿ ಹೋಗಬೇಡಿ. ಜೆಮಾಕ್ಸಿಗೆ ಗೌರವ ಕೊಟ್ಟು ಈ ಬಿಲ್ಲನ್ನು ವಾಪಸ್ಸು ಪಡೆಯಬೇಕೆಂದು ಪ್ರಾರ್ಥಿಸುತ್ತೇನೆ.

ಚೇರ್ಮನ್‌ರವರು.—ಇವತ್ತಿನದಿವಸ ಕಾರ್ಯಕ್ರಮದ ಪಟ್ಟಿ ಪ್ರಕಾರ ಈ ಮಸೂದೆಯಲ್ಲದೆ ಇನ್ನು ಎರಡು ಮಸೂದೆಗಳನ್ನು ಪಾಸ್ ಮಾಡಬೇಕಾಗಿದೆ. ಆದ್ದರಿಂದ ಸಮಯ ತಿಳಿದುಕೊಂಡು ಮಾನ್ಯ ಸದಸ್ಯರು ಮಾತನಾಡಬೇಕಾಗುತ್ತದೆ.

† ಶ್ರೀ ಡಿ.ಟಿ. ಮಾಯಣ್ಣ (ಹುಲಿಯೂರ್‌ದುರ್ಗ).—ಮಾನ್ಯ ಅಧ್ಯಕ್ಷರೇ, ವಿಧಾನ ಸೌಧದಲ್ಲಿ ಕರ್ನಾಟಕ ಟರ್ಫ್ ಕ್ಲಬ್‌ಗೆ ಸಂಬಂಧಪಟ್ಟ ಮಸೂದೆಯನ್ನು ತಂದಿದ್ದಾರೆ. ಇದರಲ್ಲಿ ಸರ್ಕಾರ ಅಧಿಕಾರಿಗಳು ಕೂಡ ಸದಸ್ಯರಾಗಿರುವುದು ಶೋಚನೀಯ. ನಮ್ಮಲ್ಲಿ ಮೊದಲಿಗೆ ಬೇಕಾದಷ್ಟು ಜೂಜುಗಳು ನಡೆಯುತ್ತಿದ್ದವು. ಸಮಾಜ ಮುಂದುವರಿದಂತೆ ಎಲ್ಲಾ ಜೂಜುಗಳನ್ನು ತಪ್ಪಿಸಿ ಕುದುರೆ ಜೂಜನ್ನು ಮಾತ್ರ ಉಳಿಸಿಕೊಂಡು ಬಂದಿದ್ದಾರೆ. ಕೋಳಿ ಹುಂಜನ ಜೂಜು; ಕೌಜಲ ಹಕ್ಕಿ ಜೂಜು ಇತರೆ ಜೂಜುಗಳು ನಡೆಯುತ್ತಿದ್ದವು. ಕುದುರೆಗಳನ್ನು ಬೆಳೆಸುವುದಕ್ಕೆ ಸಂಬಂಧಪಟ್ಟಂತೆ ಕುಣಿಕಲ್ ನಲ್ಲಿ ಒಂದು ಸ್ಟಡ್ ಫಾರಂ ಇದೆ. ಅಲ್ಲಿ ಬೇಕಾದಷ್ಟು ಕುದುರೆಗಳನ್ನು ಬೆಳೆಸುತ್ತಿದ್ದಾರೆ. ಅಲ್ಲಿ ಅಧಿಕಾರಿಗಳು ಬೇಕಾದಷ್ಟು ಜನ ಇದ್ದಾರೆ! ಅಲ್ಲಿ ಕೆಲಸ ಮಾಡುವುದಕ್ಕೆ ನೌಕರರನ್ನು ಕೂಡ ಇಟ್ಟುಕೊಂಡಿದ್ದಾರೆ. ಇದರಲ್ಲಿ ಸರ್ಕಾರ ತನಗೆ ಬೇಕಾದ ರೀತಿಯಲ್ಲಿ ಕಂಟ್ರೋಲ್‌ನಲ್ಲಿ ತೆಗೆದುಕೊಳ್ಳುವುದರಲ್ಲಿ ನನ್ನ ಅಭ್ಯಂತರವಿಲ್ಲ. ಆದರೆ ಈ ಕುದುರೆಗಳನ್ನು ಸಾಕುವುದರಲ್ಲಿ ಒಂದು ವೈಶಿಷ್ಟ್ಯವಿದೆ. ಇದನ್ನು ಸರ್ಕಾರ ಮಾಡುವುದಕ್ಕೆ ಆಗದೆ ಬೆಂಗಳೂರು ಟರ್ಫ್ ಕ್ಲಬ್‌ನ ಜಮೀನನ್ನು ಲೀಸ್‌ಗೆ ಕೊಟ್ಟರು. ಈ ಜಮೀನನ್ನು ವರ್ಗಾವಣೆ ಮಾಡುವ ಸಂದರ್ಭದಲ್ಲಿ ಆಗ ಇದ್ದ ಸಂಭಂಧಪಟ್ಟ ಮಂತ್ರಿಯವರನ್ನು ಈ ಸ್ಟಡ್ ಫಾರಂ ಏನಿದೆ ಇದು ಟಿಪ್ಪು ಸುಲ್ತಾನನ ಕಾಲದಿಂದಲೂ ಬಂದಿರತಕ್ಕಂಥಾದ್ದು ಇದನ್ನು ಸರ್ಕಾರದವರೇ ವಹಿಸಿಕೊಳ್ಳಿನೇ ಕೆಂದು ಕೇಳಿಕೊಂಡೆ. ಅದಕ್ಕೆ ಆ ಸಚಿವರು ಏನು ಹೇಳಿದರು ಅಂದರೆ ಈ ಸ್ಟಡ್ ಫಾರಂನ್ನು ನಾವು ಮೈನ್‌ಟೈನ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಇದನ್ನು ಸ್ಪೆಷಲೈಸ್ ಆಗಿ ನಡೆಸುವಂತಹ ಜನಗಳಿಗೆ ಹ್ಯಾಂಡ್ ಓವರ್ ಮಾಡಬೇಕೆಂದು ಹೇಳಿದರು. ಈ ರೇಸ್‌ಕೋರ್ಸ್ ಜಾಗ ಸುಮಾರು ೫೦೦ ಎಕರೆಗೂ ಜಾಸ್ತಿ ಇದೆ. ಅಲ್ಲದೆ ಅಲ್ಲಿ ಕೆಲಸ ಮಾಡತಕ್ಕ ಜನಗಳೂ ಕೂಡ ಕುಣಿಗಲ್‌ನಲ್ಲೇ ವಾಸ ಮಾಡುತ್ತಿದ್ದಾರೆ. ಆ ಜನರಿಗೆ ಸರಿಯಾದ ವೇತನ ಸಿಕ್ಕದೆ.....

(ಅಧ್ಯಕ್ಷರು.—ಪೀಠರನ್ನು ಅಲಂಕರಿಸಿದರು.)

ಅಧ್ಯಕ್ಷರು.—ಪ್ರಾಸಂಗಿಕವಾಗಿ ಎಷ್ಟು ಬೇಕಾದರೂ ಹೇಳಬಹುದು. ಆದರೆ ಕಾಲವಕಾಶ ಕಡಿಮೆ ಇರುವುದರಿಂದ ತಾವು ಈಗ ಸಭೆಯ ಮುಂದಿರುವ ಮಸೂದೆ ಬಗ್ಗೆ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಟಿ. ಮಾಯಣ್ಣ.—ಈಗ ಅಲ್ಲಿ ಸ್ಟೈಕ್ ನಡೆಯುತ್ತಿದೆ. ಅದನ್ನು ಸರ್ಕಾರದ ಕಂಟ್ರೋಲ್‌ಗೆ ತೆಗೆದುಕೊಳ್ಳುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ, ಆದರೆ ಈ ರೇಸ್ ಏನು ನಡೆಯುತ್ತಿದೆ ಅದನ್ನು ಆ ಕ್ಲಬ್‌ಗೇ ಬಿಟ್ಟು ಸರ್ಕಾರ ಇದಕ್ಕೆ ಮಧ್ಯೆ ಬರಬಾರದೆಂದು ಹೇಳಿ ನಾನು ಇದನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಬಸವನಗುಡಿ).—ಸನ್ಮಾನ್ಯ ಸಭಾಧ್ಯಕ್ಷರೆ, ಈ ಮಸೂದೆಯ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳುವುದಕ್ಕೆ ಮುಂಚೆ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಕರ್ನಾಟಕ ಸೊಸೈಟೀಸ್ ಆಕ್ಟ್‌ಗೂ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್‌ಗೂ

ಒಂದಕ್ಕೊಂದಕ್ಕೆ ವ್ಯತ್ಯಾಸವಿದ್ದರೂ ಅನೇಕ ಜನ ಇದು ಎರಡೂ ಒಂದೇ ಎಂದು ತಪ್ಪಾಗಿ ತಿಳಿದು ಕೊಂಡಿದ್ದಾರೆ. ಆದ್ದರಿಂದ ಇವೆರಡನ್ನೂ ಬೇರೆ ಬೇರೆಯಾಗಿ ತಂದರೆ ಒಳ್ಳೆಯದೆಂದು ನಾನು ಹೇಳ ಬಯಸುತ್ತೇನೆ.

ಇನ್ನು ಈ ತಿದ್ದುಪಡಿಯಲ್ಲಿ ೪ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. Statement of Objects and Reasons—ನಲ್ಲಿ "There are nearly 17,000 Societies in the State. The Registrar of Societies feel it very difficult to have effective control over all those societies" ಎಂದು ಇದೆ. ಎರಡನೆಯದಾಗಿ ಸೆಂಟ್ರಲೈಸ್ ಆಗಿರತಕ್ಕ ಆಡಳಿತವನ್ನು ಡೀ ಸೆಂಟ್ರಲೈಸ್ ಮಾಡತಕ್ಕ ಅಧಿಕಾರ, ಮೂರನೆಯದಾಗಿ ಅಡ್ಮಿನಿಸ್ಟ್ರೇಟರ್ ರವರಿಗೆ ಕೊಟ್ಟಿರತಕ್ಕ ಅಧಿಕಾರ ೨ ವರ್ಷಕ್ಕೆ ಬದಲಾಗಿ ೪ ವರ್ಷ ಎಂದು ಮಾಡಿರುವುದು ಮತ್ತು ನಾಲ್ಕನೆಯದಾಗಿ Appointment of Advisory Council. ನನ್ನ ಮಟ್ಟಿಗೆ ಹೇಳುವುದಾದರೆ ಈ ತಿದ್ದುಪಡಿಯನ್ನು ಈಗಲೇ ತರಬೇಕಾದ ಅವಶ್ಯಕತೆ ಇರಲಿಲ್ಲ. ರೇಸ್‌ಕೋರ್ಸ್ ವಿಷಯವಾಗಿ ತಿದ್ದುಪಡಿಯನ್ನು ತಂದಿದ್ದಾರೆಂದು ಶ್ರೀಮತಿ ಪ್ರಮಿಳ ಅವರು ಹೇಳಿದ್ದರಿಂದ ನಾನು ಇದರ ಬಗ್ಗೆ ಮಾತನಾಡಬೇಕಾಗಿದೆ. ಅನೆಕ್ಷರ್ ೩ ರಲ್ಲಿ.

(*a*) the promotion of charity.

(*b*) the promotion of education, science, literature or the fine arts ;

(*c*) the promotion of sports otner than horse racing ;

(*d*) the instruction and the diffusion of knowledge relating to commerce or industry or of any other useful knowledge ;

(*e*) the diffusion of political education ;

(*f*) the foundation or maintenance of libraries or reading rooms for general use among the members or open to the public or of public museums and galleries of painting and other works of art ;

ಎಂದು ಅನೇಕ ಧ್ಯೇಯೋದ್ದೇಶಗಳನ್ನು ಇದರಲ್ಲಿ ನಿರ್ದಿಷ್ಟವಾಗಿ ಹೇಳಿದೆ. ಆದರೆ ಇದರಲ್ಲಿ ಈ ರೇಸ್‌ನ ವಿಚಾರ ವಿತಕ್ಕೆ ತರಬೇಕೆಂದು ಹೇಳುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಗ್ಯಾಂಬ್ಲಿಂಗ್ ಆಕ್ಟ್ ಎಂದು ಪ್ರತ್ಯೇಕವಾದ ಆಕ್ಟ್ ಇರುವುದರಿಂದ ಈ ರೇಸ್ ವಿಚಾರವನ್ನು ವಿದ್ಯಾಭ್ಯಾಸ, ಧಾರ್ಮಿಕ ಕೆಲಸಗಳು, ಸ್ಪೋರ್ಟ್ಸ್ ಇದರ ಜೊತೆಯಲ್ಲಿ ಸೇರಿಸಬಾರದೆಂದು ಕಡಿದಾಳ್ ಮಂಜಪ್ಪನವರು ೧೯೫೮ ರಲ್ಲೇ ಸ್ಪಷ್ಟವಾಗಿ ಹೇಳಿದ್ದಾರೆ. ಇದನ್ನು ಮಾನ್ಯ ಕಡಿದಾಳ್ ಮಂಜಪ್ಪನವರು ೧೯೫೮ರಲ್ಲೇ ಹೇಳಿರುವುದರಿಂದ. ಈ ರೇಸ್‌ಕೋರ್ಸ್‌ನ್ನು ವಿದ್ಯಾಭ್ಯಾಸ, ಧಾರ್ಮಿಕ ಕೆಲಸ, ಸ್ಪೋರ್ಟ್ಸ್ ಇವುಗಳ ಜೊತೆಯಲ್ಲಿ ಸೇರಿಸಿರುವುದು ತಪ್ಪು, ಇದನ್ನು ಗ್ಯಾಂಬ್ಲಿಂಗ್ ಜೊತೆಯಲ್ಲಿ ತೆಗೆದುಕೊಳ್ಳಬೇಕಾಗಿತ್ತು ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಇನ್ನೊಂದು ವಿಷಯ ಹೇಳುವುದಾದರೆ ಮಾನ್ಯ ಮಳ್ಳೂರು ಆನಂದರಾವ್‌ರವರು ಹೇಳಿದಹಾಗೆ ಇವತ್ತು ಅನೇಕ ಸೊಸೈಟಿಗಳ ವ್ಯವಹಾರ ಸರಿಯಾಗಿ ನಡೆಯುತ್ತಿಲ್ಲ. ಅನೇಕ ವರ್ಷಗಳಾದರೂ ಜನರಲ್ ಬಾಡಿ ಮೀಟಿಂಗ್ ಮಾಡಿಲ್ಲ. ರಿಜಿಸ್ಟ್ರಾರ್ ಆಫೀಸಿನಲ್ಲಿ ಹೋಗಿ ನೋಡಿದರೆ ಅನೇಕ ಸೊಸೈಟಿಗಳು ಯಾವಾಗ ರಿಜಿಸ್ಟರ್ ಆಗಿವೆ ಎಂಬುದೂ ಗೊತ್ತಾಗುವುದಿಲ್ಲ; ಅಲ್ಲಿ ಯಾವ ಸೊಸೈಟಿಯ ವಿಚಾರದಲ್ಲೂ ಸರಿಯಾದ ದಾಖಲೆಗಳು ಸಿಕ್ಕುವುದಿಲ್ಲ. ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ಪ್ರತಿ ವರ್ಷ ಜನರಲ್ ಬಾಡಿ ಮೀಟಿಂಗ್ ಆಗಲೇಬೇಕು, ಆದರೆ ಆಗುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ನಾನು ಒಂದು ಸೊಸೈಟಿಯ ಸದಸ್ಯ. ಕಳೆದ ೧೦ ವರ್ಷಗಳಿಂದಲೂ ಅದರ ಜನರಲ್ ಬಾಡಿ ಮೀಟಿಂಗ್ ಆಗಿಲ್ಲ.

ಆದ್ದರಿಂದ ನಾನು ಹೇಳುವುದೇನೆಂದರೆ ಈ ಗ್ಯಾಂಬ್ಲಿಂಗ್ ಮತ್ತು ರೇಸ್ ಕ್ಲಬ್‌ಗೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುವುದರಿಂದ ಇದಕ್ಕಾಗಿಯೇ ಒಂದು ಪ್ರತ್ಯೇಕವಾದ ಆಕ್ಟ್‌ನ್ನು ಮಾಡುವುದು ಒಳ್ಳೆಯದು. ಈ ಟರ್ಫ್ ಕ್ಲಬ್ ಸರಿಯಾಗ ಕೆಲಸ ಮಾಡದಿದ್ದರೆ ಅಲ್ಲಿಗೆ ಒಬ್ಬ ಅಡ್ಮಿನಿಸ್ಟ್ರೇಟರ್‌ನ್ನು ಪಾಕಿ, ಅತ ನೇರವಾಗಿ ಸರ್ಕಾರದ ಕೈಕೆಳಗೆ ಕೆಲಸಮಾಡುವಂತೆ ಮಾಡಿ. ಒಟ್ಟಿನಲ್ಲಿ ಹೇಳುವುದಾದರೆ ಈ ರೇಸ್‌ನ್ನು ಧಾರ್ಮಿಕ ಕೆಲಸಗಳು, ವಿದ್ಯಾಭ್ಯಾಸ, ಇವುಗಳ ಜೊತೆಗೆ ಸೇರಿಸದೆ ಪ್ರತ್ಯೇಕವಾಗಿ ತರಬೇಕು. ಮತ್ತು ಆಡಳಿತವನ್ನು ಡೀ ಸೆಂಟ್ರಲೈಸ್ ಮಾಡುವುದರಿಂದ ಇದರ ಖರ್ಚು ಕೂಡ ಪ್ರತ್ಯೇಕವಾಗಿ ಬರುತ್ತದೆ. ಆದ್ದರಿಂದ ಇದರ ಬಗ್ಗೆ ಕೂಡ ಒಂದು ಸರಿಯಾದ ರೀತಿಯಲ್ಲಿ ತಿದ್ದುಪಡಿಗಳನ್ನು ಮಾಡಿ ಸಭೆಯ ಮುಂದೆ ತರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI H. GANGADHARAN (Krishnaraja).—Speaker Sir, I have to oppose the Bill for more than one reason. While introducing the Bill the reasons and the objects stated according to me are four in number (1) the bill is introduced with an intention to decentralise the power that has been vested in the Registrar (2) to introduce and extend this Act to the Horse Racing (3) extending the period of administrators from 2-4 years and (4) introduction of advisory council to assist the administrator appointed by them.

At the outset I would like to state that the objects and reasons are not going together; they are not one supporting the other for the simple reason that in the original Act a particular authority was vested with the authority to register an organisation whereas in this amendment, the government has thought of appointing an authority at the district level necessarily by a notification to perform the acts and duties. They are not specific about it. They want to take away the powers by legislation which vested in the authority and in a way, I would say that this is going towards over-centralisation rather than decentralisation. If the government made an amendment stating either Deputy Commissioner or the Divisional Commissioner or the Tahsildar would have been vested with the power we could have understood it that there was decentralisation. When the government takes away the power which is already vested in the authority, it is going to be over-centralisation. The second object is to extend the Act to apply for the horse racing. I do not wish to state much about these things because much has been said by others. The Hon. Finance Minister has intervened and said that even under the Contract Act this Horse racing is exempted, but unfortunately the purpose for expempting horse racing under the Contract Act is for a different thing. When the Act was passed they never thought of betting. The horse racing was allowed to give support to the sport but not for betting on them. We have already damaged the society morally by giving opportunity for racing, lottery and also allowing recreation clubs to come up. Therefore I do not wish to support this amendment to extend this Act for the horse racing.

The third point is to extend terms of administrators from 2 to 4 years. Are we not having confidence in the ability of administors? If our officer who is appointed as an administrator cannot setright things within a period of two years, how can we expect him to do it within four years. Therefore Government seems to have no confidence in the ability and the efficiency of the administrators who is going to be appointed to such societies. Therefore this also has to be opposed. It is not a good proposal to extend its jurisdiction. The last aspect of it is, the government is introducing an element of appointing the advisory council. Where is the need for such an advisory council? By this we are going to make the societies as pinjarapoles where some people will be accommodated. They are going to accommodate their men in the name of these advisory councils. That is why I call it a pinjarapole. The Government may say there is the necessity because the societies are not functioning well therefore the advisory council is necessary. Again the government has no confidence in the ability of officers who are going to be appointed as administrators. There is sufficient advice in the Act itself. The Act gives the advice in the forms of rules. The Government can act by the advice pro vided in the Act itself. Why should there be a council? Sections 20 to 25 of the Act are very clear. If the societies do not work properly, there are many provisions to take actions against such societies. Under sec.28. the Registrar can take action *suo moto* against the erring directors of the society.

I further say that the societies are meant for carrying on the public charitable acts and the public charity comes within the purview of the implied trust. If the society does not work properly. it is not the individual who is going to be benefitted, it is the society which is benefitted. The matter can be taken to the court to set right things, by the public also. There is no reason to think for appointing advisory council. This itself shows that they are not having any good intention. The amendment is intended to keep some people whom they want in the council and who would be giving them headache. I therefore oppose this bill. I have to state before this House that the introduction of such legislations allowing even nominations of the members to the societies and appointing advisory Councils day by day we are becoming authoritarian in our policy. By this method we are not saving the democracy but we are drifting towards authoritarianism; we are becoming more and more authoritarianism; we are taking away the powers of the people. The intention of the Act was to encourage self-service, to encourage co-operative attitude and encourasing people to do some selfless service to the society without any consideration of the caste, creed or colour. With this idea in view, this Act was passed in the year 1960. Now

we are going to change the Act to introduce the horse racing. Are we not satisfied with one turf club? We are therefore destroying the spirit of the original. A t and destroying the democratic spirit among the people. Therefore I oppose this Bill with all the force at my command.

† ಶ್ರೀ ಪಿ. ರಾಮದೇವ್ (ಮೆಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನನ್ನ ಸ್ನೇಹಿತರು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಇಲ್ಲಿ ಮಂಡಿಸುತ್ತಾ ೨–೩ ಕಾರಣಗಳನ್ನು ಕೊಟ್ಟಿದ್ದಾರೆ ಇದರಲ್ಲಿ ಒಂದನೆಯದು ಬೆಂಗಳೂರು ಟರ್ಫ್ ಕ್ಲಬ್ಬಿನಲ್ಲಿ ಮೆಂಬರ್‌ಷಿಪ್ ಸಿಕ್ಕುತ್ತಾ ಇಲ್ಲ. ಹಣವಂತರಿಗೆ ಮಾತ್ರ ಸೀಮಿತವಾಗಿದೆ ಎನ್ನತಕ್ಕಂಥಾ ಒಂದು ದೃಷ್ಟಿಯಿಂದ ಸರ್ಕಾರ ಇದನ್ನು ಯೋಚನೆ ಮಾಡಿದೆ ಎಂದು ಹೇಳಿದರು. ಈಗ ಆಡ್ವೈಜರಿ ಕೌನ್ಸಿಲ್ ಮತ್ತು ಅಡ್ಮಿನಿಸ್ಟ್ರೇಷನ್ ಅನ್ನು ಆನೇಕ ಸಂಘ ಸಂಸ್ಥೆಗಳಿಗೆ ಹಾಕತಕ್ಕಂಥಾ ಪರಿಸ್ಥಿತಿ ಬರುತ್ತಿದೆಂದು ಹೇಳಿದರು. ಇವೊತ್ತಿನ ದಿವಸ ನಾನು ಮಾನ್ಯ ಮಂತ್ರಿಗಳಿಗೆ ಒಂದು ಪ್ರಶ್ನೆ ಹಾಕಬಯಸುತ್ತೇನೆ. ಈ ಒಂದು ಕಾನೂನಿನ ಸುಗ್ರೀವಾಜ್ಞೆಯನ್ನು ಸೆಪ್ಟೆಂಬರ್ ತಿಂಗಳಿನಲ್ಲಿ ತಂದಿದ್ದಾರೆ. ಆನಂತರ ೩ ತಿಂಗಳಲ್ಲಿ ಕರ್ನಾಟಕ ಟರ್ಫ್ ಕ್ಲಬ್ ರಿಜಿಸ್ಟರ್ ಮಾಡಿದ್ದಾರೆ. ಅದರಲ್ಲಿ ಸರ್ಕಾರದ ನಾಮಿನೇಷನ್ ಮೆಂಬರ್ಸ್ ಇದ್ದಾರೆ. ಇವರ ವಿಳಾಸ ಕರೆಸ್‌ಪಾಂಡೆನ್ಸ್ ಮಾಡುವುದಕ್ಕೆ ಇರುವುದು ವಿಧಾನಸೌಧ ಎಂದು ಇದೆ. ಇದು ಏನು ತೋರಿಸುತ್ತದೆ ಎಂದರೆ ಸರ್ಕಾರ ದವರು ಜನಗಳು ಜೂಜಾಡುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿಕೊಟ್ಟಂತಾಗುತ್ತದೆ. ಈಗ ಬೆಂಗಳೂರ್ ಟ್ರರ್ಫ್ ಕ್ಲಬ್‌ನಲ್ಲಿ ಇರತಕ್ಕ ೧೩ ಜನ ಸದಸ್ಯರ ಪೈಕಿ ೯ ಜನ ಚುನಾಯಿತ ಸದಸ್ಯರು, ನಾಲ್ಕು ಜನ ಸರ್ಕಾರದ ಪ್ರತಿನಿಧಿಗಳು ಇದ್ದಾರೆ. ಬೆಂಗಳೂರು ಟರ್ಫ್‌ಕ್ಲಬ್ ಮತ್ತು ಮೈಸೂರು ರೇಸ್‌ಕ್ಲಬ್ ಇವೆರಡನ್ನೂ ತೆಗೆದುಕೊಳ್ಳಬೇಕು ಎಂದು ಮಾಡಿರುವುದು ಕೇವಲ ದುರುದ್ದೇಶದಿಂದ ಇದನ್ನು ತಂದಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಕ್ಲಬ್‌ಗಳ ಮೇಲೆ ಸರ್ಕಾರದವರು ಹತೋಟಿ ಮಾಡುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ವರ್ಷೇ ವರ್ಷೇ ಲೈಸೆನ್ಸ್ ಕೊಡುತ್ತಿದ್ದಾರೆ. ಲೈಸನ್ಸ್ ಕೊಡುವಾಗ ಕಂಡೀಷನ್ ಹಾಕಬೇಕು. ಸರ್ಕಾರಕ್ಕೆ ಮೆಂಬರ್‌ಶಿಪ್ ಸಿಕ್ಕುತ್ತಾ ಇಲ್ಲ ಎಂದರೆ ಮೆಂಬರ್‌ಶಿಪ್ ಕೊಟ್ಟರೆ ಲೈಸನ್ಸ್ ಕೊಡುತ್ತೇವೆ ಎಂದು ಮಾಡಿ. ಆರೀತಿ ನೀವು ಮಾಡಿಲ್ಲ. ಅದನು ಬಿಟ್ಟು ದಿನೇ ದಿನೇ ಲೈಸನ್ಸ್ ಕೊಡುತ್ತಿದ್ದಾರೆ. ಆದರೆ ಇವರ ಹೇಳಿಕೆಯಿಂದ ಒಂದು ವಿಶೇಷ ಜನರಲ್ಲ ಬಾಡಿ ಕರೆದು ೧೫೦ ಮೆಂಬರ್‌ಶಿಪ್ ತೆಗೆದು ಕೊಳ್ಳುತ್ತಾರೆಂದು ಗೊತ್ತಾಗಿದೆ. ಆದನ್ನು ಫೈನಾನ್ ಸೆಕ್ರೆಟರಿ ಆಗುವುದಿಲ್ಲ ಎಂದು ಕ್ಯಾನ್ಸಲ್ ಮಾಡಿಸಿದ್ದಾರೆ.

೧೨–ನೂನ್.

ಮಾನ್ಯ ಮಂತ್ರಿಗಳು ಮೆಂಬರ್‌ಶಿಪ್ ಕೊಡುತ್ತಾ ಇಲ್ಲ ಎಂದು ಹೇಳಿದರು. ಮೆಂಬರ್‌ಶಿಪ್ ಕೊಡುವುದಕ್ಕೆ ತಯಾರಾಗಿರುವಾಗ ಈ ಬಿಲ್ ಏಕೆ ಬೇಕು. ಈ ಕ್ಲಬ್‌ನ್ನು ನಡೆಸುವುದಕ್ಕೆ ೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್‌ನಲ್ಲಿ ಸ್ಪೋರ್ಟ್ಸ್‌ಗೆ ಮಾತ್ರ ರಿಜಿಸ್ಟ್ರೇಷನ್ ಮಾಡಿಸುವುದಕ್ಕೆ ಅವಕಾಶವಿದೆ. ಹಾರ್ಸ್ ರೇಸ್‌ನಲ್ಲಿ ಬೆಟ್ಟಿಂಗ್ ಮಾಡುವುದು ಸ್ಪೋರ್ಟ್ ಅಲ್ಲ. ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ರಿಜಿಸ್ಟರಾಗಿರತಕ್ಕ ಟರ್ಫ್ ಕ್ಲಬ್ ಮುಂಖಾಂತರ, ಸೊಸೈಟಿ ಮುಖಾಂತರ ಬೆಟ್ಟಿಂಗಿಗೆ ಅವಕಾಶ ಕೊಡುತ್ತೀರಾ ? ಬೆಟ್ಟಿಂಗಿಗೆ ಅವಕಾಶ ಕೊಟ್ಟರೆ ಕ್ರಿಕೆಟ್‌ನಲ್ಲೂ ಬೆಟ್ಟಿಂಗ್ ಆಗುತ್ತದೆ, ಪ್ರತಿಯೊಂದು ಕ್ರೀಡೆಯಲ್ಲಿಯೂ ಇದು ಆಗುತ್ತದೆ. ಆಗ ಆದು ಕ್ರೀಡೆಯಾಗುವುದಿಲ್ಲ, ಗ್ಯಾಂಬ್ಲಿಂಗ್ ಆಗುತ್ತದೆ. ಇದರ ಬಗ್ಗೆ ಬೇಕಾದಷ್ಟು ತಕರಾರು ಆಗುತ್ತದೆ. ಅಂಡರ್ ಸ್ಪೋರ್ಟ್ಸ್ ಹಾರ್ಸ್ ರೆಸಿಂಗ್ ಮಾಡಿ, ನಮ್ಮ ಆಕ್ಷೇಪಣೆ ಇಲ್ಲವೇ ಇಲ್ಲ. ಇದರ ಜೊತೆಯಲ್ಲಿ ಅಮೆಂಡ್‌ಮೆಂಟ್ ಮಾಡಿದ ಬಿಲ್ಲಿನ ಫಲ, ಅದರ ಶಿಶು ಈ ಟರ್ಫ್ ಕ್ಲಬ್. ರೇಸನ್ನೂ ತೆಗೆದುಕೊಳ್ಳತಕ್ಕ ಪ್ರಯತ್ನ ನಡೆಯುತ್ತಾ ಇದೆ. ಬೆಟ್ಟಿಂಗಿಗೆ ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಲೀಗಲ್ಲಾಗಿ ಸಾಕಷ್ಟು ತೊಂದರೆಯಾಗುತ್ತದೆ. ಇದು ಸದುದ್ದೇಶದಿಂದ ಆದುದಲ್ಲ. ಇದರಲ್ಲಿ ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡತಕ್ಕಂಥಾದ್ದಿದೆ. ಇದು ಸರ್ಕಾರದಲ್ಲಿರತಕ್ಕ ದೊಡ್ಡ ದೊಡ್ಡ ಉನ್ನತ ಅಧಿಕಾರಿಗಳ ಪಿತೂರಿ ಎಂದರೆ ತಪ್ಪಲ್ಲ. ಫೈನಾನ್ಸ್ ಸೆಕ್ರೆಟರಿಯವರು ಅದರಲ್ಲಿದ್ದಾರೆ. ಅವರೆಲ್ಲಾ ರೇಸಿಗೆ ಹೋಗ ತಕ್ಕವರು, ಅವರು ರೇಸಿನಲ್ಲಿರತಕ್ಕವರು, ಅದಕ್ಕೋಸ್ಕರ ರೇಸಿಗೆ ಬೆಂಬಲ ಕೊಡುತ್ತಾರೆ. ಮೈಸೂರು ರೇಸ್ ಕ್ಲಬನ್ನು ಬೆಂಗಳೂರು ಟರ್ಫ್ ಕ್ಲಬನ್ನು ತಮ್ಮ ಕೈಗೆ ತೆಗೆದುಕೊಂಡು ಕರ್ನಾಟಕ ಟರ್ಫ್ ಕ್ಲಬ್

ಮುಂಖಾಂತರ ನಡೆಸಬೇಕು ಎಂದು ಇದ್ದಾರೆ. ಅಡ್ಮಿನಿಸ್ಟ್ರೇರಟ್ನು ಹಾಕಬೇಕು. ಇದಾದ ಮೇಲೆ ಅಡ್ವೈಸರಿ ಕೌನ್ಸಿಲ್‌ನಲ್ಲಿ ಇವರೇ ಇರಬೇಕು ಎನ್ನುವ ದುರುದ್ದೇಶದಿಂದ ಮಾಡಿದ್ದಾರೆ. ಖಂಡಿತವಾಗಿ ಇದರ ಉದ್ದೇಶ ಸಫಲವಾಗುವುದಿಲ್ಲ. ಇದರ ಬಗ್ಗೆ ಜಿನೇ ತಾರೀಖಿಂ ಸಭೆ ಇದೆ. ಲೈಸನ್ಸ್ ಕ್ಯಾನ್ಸಲ್ ಮಾಡಿಸಿ, ಜೂಜನ್ನೇ ಕ್ಯಾನ್ಸಲ್ ಮಾಡಿಸಿ, ಅದಕ್ಕೆ ನಾವೆಲ್ಲಾ ಸಂಪೂರ್ಣ ಬೆಂಬಲ ಕೊಡುತ್ತೇವೆ. ಉತ್ತಮವಾಗಿ ಕೆಲಸ ಮಾಡತಕ್ಕಂಥ ಸಂಘ ಸಂಸ್ಥೆಗಳನ್ನು ಕೆಡಿಸತಕ್ಕಂಥ ಪ್ರಯತ್ನ ಬೇಡ. ರಾಜ್ಯಗಳಿಗೆ ಹೆಚ್ಚು ಹೆಚ್ಚು ಸ್ವಾಯತ್ತತೆಬೇಕು ಎಂದು ಕೇಂದ್ರ ಸರ್ಕಾರವನ್ನು ಕೇಳುತ್ತಿದ್ದೀರಿ. ರಿಜಿಸ್ಟ್ರೇಷನ್ ಆದ ಸಂಘ ಸಂಸ್ಥೆಗಳಲ್ಲಿ ನೀವು ಕೈಹಾಕಿ ಇರತಕ್ಕ ಉತ್ತಮ ವ್ಯವಸ್ಥೆಯನ್ನು ಹಾಳುಮಾಡುವುದು ಸರಿಯಲ್ಲ. ಆದುದರಿಂದ ಈ ಬಿಲ್ಲನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

† SRI B. BASAVALINGAPPA (Minister for Revenue).—Mr. Speaker Sri, I am very happy that the hon'ble Members have taken very lively interest in the minor amendment brought in this House. Many Members have participated and given useful suggestions for the smooth functioning of the societies effectively. Mr. Shamanna made and useful suggestion that the societies are being carried on without being controlled by the Registrar of Societies. He said no General Body meetings are being held regularly. and with the result many of the societies have become defun t and there is no effective control over them etc., I keep the suggestions in my mind and see that these societies are activised. Mr. Mallur Ananda Rao and S.S. Arakeri have made very useful ruggestions regarding the functioning of some of these Educational Societies registered under this Act. The Govern ient have taken note of this and with that purpose in view only this amendment has been brought out and if there societies which are not functioning properly. the only method is to take action under Section 27, and can el them. What we have now brought is to see that no societies should go defunct or to go beyond our control. For that we are suggesting to have an Advisory Council. In case the Administrator goes wrong the entire society will go wroug. Then, how to control such societies ? Now we are thinking of setting up of Advisory Council to advise and guide. Our intention is to see that proper and effectvive control is done. Then as far as possible within the limited period the General Body is held and proper control is given to the persons elected. Much debate has taken place on Section 3 of the Act. That is regarding deleting 'Horse Race'. The object of Section 3 is very specific. Section 3 reads like this.

> Sec. 3. The following Societies may be registered under this Act: Societies established for—
>
> (a) the promotion of charity ;
>
> (b) the promotion of education, science. literature or the fine arts ;
>
> (c) the promotion of sports other than horse racing;

The intention of the Bill is to delete (c) *i.e.* the promotion of sports other than horse racing. This is a simple amendment. We are not thinking of horse racing.

SRI T. R. SHAMANNA.—Then what is the result ?

SRI B. BASAVALINGAPPA.—The result is that even other Members can form societies. Any societies registered under this Act may take up that also. How do you prohibit persons from horse racing ? Under this amendment we are allowing people to form societies for any purpose; not necessarily for horse racing. If the people try to take up this we don't prohibit. This is the purpose of the amendment.

SRI S. R. BOMMAI.—If the purpose of horse racing is excluded from the Bill anybody can form such a society and run horse racing. The intention of the Legislature while enacting the original Act was that it should be only for charitable institution which will give useful and purposeful service to the society. But this horse racing is not useful to the society; but it is harmful. Therefore, it was prohibited there. By removing this now you are encouraging people to form such societies and allowing people to become members of such societies. That is the moral aspect of it.

SRI B. BASAVALINGAPPA.—Horse racing is not abolished in the State. That is a fact.

SRI S. R. BOMMAI.—Sri Kadidal Manjappa has made it very clear in the debate and he has given reasons why it should be excluded. He has made it very clear that it is not in the interests of the society.

SRI K. PUTTASWAMY.—Under this amendment provision, Government itself is almost sponsoring the Karnataka Turf Club with an office situated in the Vidhana Soudha. Government brought this amendment with a view to promote Karnataka Turf Club with the avowed object of conducting horse racing.

SRI B. BASAVALINGAPPA.—The fact remains that horse racing is there and it is being conducted under the Companies' Act. It is not my area and I cannot give my opinion whether horse-racing is right or is not right, whether it should be abolished or whether it should be continued. They only point intended by the amendment by deleting the words "other than horse racing" is that any can come to the Registrar and get it registered. I have already explained how the Bangalore Turf Club and the Mysore Turf Club have been functioning. We want to make it more liberal and more open to the public, so that any set of people can also do this job. But let the hon. Members keep this in mind that the scope of the Act does not extend to the area whether we should keep horse racing or not. We are not trying to discuss whether horse racing is good or bad.

Sri P. Ramdev.—It is said here: "to promote sports of all kinds and in particular horse racing". It does not come under sports. ತಾವು ಏನೋ ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತಂದಿದ್ದೀರಿ ಅದರಲ್ಲಿ ಕರ್ನಾಟಕ ಟರ್ಫ್ ಕ್ಲಬ್ ಇಲ್ಲ. ಇದರ ಬಗೆ ತಾವು ಸ್ಪಷ್ಟೀಕರಣ ಕೊಡಬೇಕು. Betting cannot be done under sports. You have promoted this.

Sri B. Basavalingappa.—We will keep the suggestions of the hon. Members in mind.

ಶ್ರೀ ಮಳ್ಳೂರು ಆನಂದರಾವ್.—ನನ್ನ ಒಂದು ಸ್ಪಷ್ಟೀಕರಣ ಏನೆಂದರೆ ವಿಕೇಂದ್ರೀಕರಣ ಎಂಬುದಾಗಿ ತಾವು ಏನು ಹೇಳಿದ್ದೀರಿ ಅದು ಇಲ್ಲಿ ಮಾತ್ರ ಮಾಡುತ್ತಿರೋ, ಅಥವಾ ಜಿಲ್ಲಾ ಮಟ್ಟದಲ್ಲೂ ಮಾಡುತ್ತಿರೋ ?

Sri B. Basavalingappa.—They have given very useful suggestions. They have stated many societies have been carrying on to their advantage and not to the advantage of the beneficiaries. Keeping that in view, we have brought this amendment, to decentralise the powers of the Registrar. Mr. Mallur Ananda Rao wanted more attention to be paid to administrative set up. We will keep his suggestion in view; while framing rules, we will make the necessary provision for this. I hope they will not give room for complaints. Most of the societies in the State have not been functioning properly and there is no effective control. The officer in charge thinks that it is not a very important department and that he need not pay more attention to this. I assure the House that better control and attention will be given to administration so as to carry on the functions of the societies more effectively than this.

ಶ್ರೀ ಮಳ್ಳೂರು ಆನಂದರಾವ್.—ನಾಳೆಯಿಂದ ಇದನ್ನು ರಿಜಿಸ್ಟ್ರರ್ ಮಾಡಿಸಬೇಕಾದರೆ, ಅವರೆಲ್ಲರೂ ಬೆಂಗಳೂರಿಗೇ ಬರಬೇಕೋ ? ಅಥವಾ ಜಿಲ್ಲಾ ಮಟ್ಟದಲ್ಲೂ ಮಾಡಿಕೊಳ್ಳಬಹುದೋ ? ಅದರ ಬಗ್ಗೆ ಸ್ಪಷ್ಟೀಕರಣ ಹೇಳಬೇಕು.

Sri B. Basavalingappa.—They need not come to Bangalore. Only to obviate that difficulty we are desentralising the powers of the Registrar, entrusting that power to the district and taluka officers.

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಇದಾದ ನಂತರ ಎಲ್ಲರೂ ರೇಸ್ ಕ್ಲಬ್ ಸೊಸೈಟೀಸ್ ಎಂಬುದಾಗಿ ಮಾಡಬಹುದೇ ?

ಶ್ರೀ ಬಿ. ಬಸವಲಿಂಗಪ್ಪ.—ಮೊದಲು ಸೊಸೈಟಿ ಮಾಡಿಕೊಂಡು ಬನ್ನಿ ಆಮೇಲೆ ನೋಡೋಣ.

Mr. Speaker.—I will now put the Consideration Motion to the vote of the House. The question is :

> "That the Karnataka Societies Registration (Amendment) Bill, 1978, as passed by the Legislative Council, be taken into consideration."

The motion was adopted

CLAUSES 2 to 6

MR. SPEAKER.—There are no amendments. I will now put it to the vote of the House. The question is :

"That Clauses 2 to 6, both inclusive, do stand part of the Bill."

The motion was adopted

Clauses 2 to 6, both inclusive, were added to the Bill.

CLAUSE 1, Etc.

MR. SPEAKER.—The question is :

"That Clause 1 the Long Title, the Preamble and the Enacting Formula do stand part of the Bill."

The motion was adopted

Clause 1, the Long Title, the Preamble and the Enacting Formula were added to the Bill.

Motion to Pass

SRI B. BASAVALINGAPPA.—Sir, I move:

"That the Karnataka Societies Registration (Amendment) Bill, 1978, as passed by the Legislative Council, be passed."

MR. SPEAKER.—I will put the Bill to the vote of the House. The question is:

"That the Karnataka Societies Registration (Amendment) Bill, 1978, as passed by the Legislative Council be passed."

The motion was adopted and the Bill was passed

Karnataka Civil Courts (Amendment) Bill, 1978. as passed by the L.C.

Motion to Consider

SRI B. B. SAYANAK.—The Hon. Minister is not present to take up this Bill.

MR. SPEAKER.—Any Cabinet Minister can move the Bill.

In the meantime, the concerned Minister may come.

SRI B. B. SAYANAK.—He must be present here.....